ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2018
ಬೆಲೆ ರೂ. 1



## ಕರ್ನಾಟಕ ರಾಜ್ಯೋತ್ಸವ

## ನಾಡು, ನುಡಿಯ ಒಗ್ಗಟ್ಟು, ಒಲವಿನ ಸಂಕೇತ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 2
ನವೆಂಬರ್ 2018, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
8447288475
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟೀಲ್
9650182413
ಬಾಬುರಾಜ್ ಪೂಜಾರಿ
9818807696
ತ್ಯಾಗೇಶ್ ಮೂರ್ತಿ
9868393961
ಸಂತೋಷ್ ಜಿ.
9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜಿ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ಇದೀಗ 63ನೇ ಕರ್ನಾಟಕ ರಾಜ್ಯೋತ್ಸವವನ್ನು ಕನ್ನಡ ನಾಡಿನ ಒಳಗೆ ಮತ್ತು ಹೊರಗಡೆ ಇರುವ ಪ್ರತಿಯೊಬ್ಬ ಕನ್ನಡಿಗರೂ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ. ನಮ್ಮ ಕರ್ನಾಟಕ ರಾಜ್ಯೋತ್ಸವವನ್ನು ಪಕ್ಷರಹಿತವಾಗಿ, ಧರ್ಮರಹಿತವಾಗಿ ಪ್ರತಿಯೊಬ್ಬರೂ ಹರ್ಷದಿಂದ ಆಚರಿಸುತ್ತಿರುವುದು ಸಂತೋಷದ ಸಂಗತಿ. ಇದು ಕನ್ನಡದ ಗಟ್ಟಿತನವನ್ನು ತೋರಿಸುತ್ತದೆ. ನವೆಂಬರ್ ತಿಂಗಳಿಡೀ ಎಲ್ಲರಿಗೂ ರಾಜ್ಯೋತ್ಸವದ ಸಂಭ್ರಮ. ಈ ತಿಂಗಳಲ್ಲಿ ಎಲ್ಲ ಕಾರ್ಯಕ್ರಮಗಳು ಕನ್ನಡಮಯವಾಗಿ ತುಂಬಾ ಹರ್ಷದಿಂದ ತುಂಬಿರುತ್ತದೆ. ಕನ್ನಡದ ನೆನಪು, ಹರ್ಷ, ಅಭಿಮಾನ, ಗೌರವ ಇವೆಲ್ಲವೂ ರಾಜ್ಯೋತ್ಸವಕ್ಕೆ ಮಾತ್ರ ಸೀಮಿತವಾಗಿರಬಾರದು. ನವೆಂಬರ್‌ನಲ್ಲಿ ವಿಶೇಷವಾಗಿ ಆಚರಿಸುವ ರಾಜ್ಯೋತ್ಸವದ ಹಬ್ಬ ಅದು ನಿರಂತರವಾಗಿರಬೇಕು. ರಾಜಧಾನಿ ದೆಹಲಿಯಲ್ಲಿ ದೆಹಲಿ ಕರ್ನಾಟಕ ಭವನ, ದೆಹಲಿ ಕರ್ನಾಟಕ ಸಂಘ, ಜನಕಪುರಿ ಕನ್ನಡ ಕೂಟ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಜೆ.ಎನ್.ಯು ಕನ್ನಡ ಅಧ್ಯಯನ ಪೀಠ, ಗುರುಗಾಂ ಕನ್ನಡ ಸಂಘ, ಕೃಷಿಕ್ ಸರ್ವೋದಯ ಫೌಂಡೇಶನ್, ಜೆ.ಎಸ್.ಎಸ್.ತಾಂತ್ರಿಕ ವಿದ್ಯಾಲಯ ನೋಯ್ಡಾ ಮುಂತಾದ ಅನೇಕ ಕನ್ನಡಪರ ಸಂಘ–ಸಂಸ್ಥೆಗಳು ಪ್ರತೀ ವರ್ಷವೂ ಆಚರಿಸುತ್ತಿರುವುದು ದೆಹಲಿಯಲ್ಲಿ ನಾವು ಕನ್ನಡನಾಡು, ನುಡಿ, ಭಾಷೆಯ ಉಳಿವಿಗೆ ಸ್ಪಂದಿಸುತ್ತಿರುವುದನ್ನು ತೋರಿಸುತ್ತದೆ. ದೆಹಲಿ ಸರಕಾರ ಕೂಡ ಕನ್ನಡ ಭಾಷೆಗೆ ಒಂದು ಅಕಾಡೆಮಿಯನ್ನು ಪ್ರಾರಂಭಿಸುತ್ತಿರುವುದು ಕನ್ನಡಿಗರಾದ ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ.

ಈ ವರ್ಷದ ರಾಜ್ಯೋತ್ಸವದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ ಕನ್ನಡದ ಹೆಸರನ್ನಿಟ್ಟು ರಾಜಧಾನಿಯಲ್ಲಿ ಕನ್ನಡದ ಭಾವುಟವನ್ನು ಹಾರಿಸುವುದರಲ್ಲಿ ನಮ್ಮ ಕಾರ್ಯಕಾರಿ ಸಮಿತಿಯ ಪ್ರಯತ್ನವನ್ನು ಈ ಸಂದರ್ಭದಲ್ಲಿ ನಾವು ಸ್ಮರಿಸಲೇಬೇಕು. ಮುಂದಿನ ದಿನಗಳಲ್ಲಿ ಬರುವ ಕಾರ್ಯಕಾರಿ ಸಮಿತಿ ಈ ರೀತಿಯ ಹತ್ತು–ಹಲವು ಯೋಜನೆಗಳನ್ನು ಹಮ್ಮಿಕೊಂಡು ದೇಶದ ರಾಜಧಾನಿ ದೆಹಲಿಯಲ್ಲಿ ಕರ್ನಾಟಕದ ಹೆಸರು ಮುಂಚೂಣಿಯಲ್ಲಿರುವಂತೆ ಕೆಲಸ ಮಾಡುವ ಅಗತ್ಯವಿದೆ.

ಸಮಸ್ತ ಕನ್ನಡಿಗರಿಗೆ ಕರ್ನಾಟಕ ರಾಜ್ಯೋತ್ಸವದ ಹಾಗೂ ದೀಪಾವಳಿಯ ಶುಭಾಶಯಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***




ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ :
011–26109615 / 26104818




DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

**ಮುನ್ನೋಟ**

## ಸಮಸ್ತ ಕನ್ನಡಿಗರಿಗೆ 63ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು.

ಈ ವರ್ಷ ನವೆಂಬರ್ 1ನೇ ತಾರೀಖಿನಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತೀ ಭಾನುವಾರ ಒಂದು ವಿಶೇಷ ಕಾರ್ಯಕ್ರಮವನ್ನು ರಾಜ್ಯೋತ್ಸವ ಸಂದರ್ಭದಲ್ಲಿ ಆಯೋಜಿಸಲಾಗುತ್ತಿದೆ.

ಕರ್ನಾಟಕ ಭವನದ ನಿವಾಸೀ ಆಯುಕ್ತರಾದ ಶ್ರೀ ನಿಲಯ ಮಿತಾಶ್ ಅವರ ನೇತೃತ್ವದಲ್ಲಿ ನವೆಂಬರ್ 1ರಂದು ಕರ್ನಾಟಕ ರಾಜ್ಯೋತ್ಸವ ಸಮಾರಂಭ ಕರ್ನಾಟಕ ಭವನದ ಸಿಬ್ಬಂದಿಯವರ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು.

ರಾಜ್ಯೋತ್ಸವದ ಅಂಗವಾಗಿ ಮೊದಲಿಗೆ ನವೆಂಬರ್ 3 ಮತ್ತು 4ರಂದು ಬಿ.ವಿ.ಕಾರಂತ ರಂಗೋತ್ಸವ–ಬಿ.ವಿ.ಕಾರಂತರ ಜೀವನ ಚರಿತ್ರೆ ಮತ್ತು ಸಾಧನೆಗಳ ಕುರಿತ ಶ್ರೀ ಟಿ.ಎಸ್.ನಾಗಾಭರಣ ಅವರ ಬಾಬಾ ಕಾರಂತ ಮತ್ತು ಸತ್ತವರ ನೆರಳು ನಾಟಕಗಳು ನಡೆದವು.

ಈ ಹಿಂದೆ ಎರಡು ವರ್ಷ ಸ್ಥಳೀಯ ಕನ್ನಡಿಗರು ವಿಶೇಷವಾಗಿ ತಯಾರಿಸಿದ ಕರ್ನಾಟಕದ ತಿಂಡಿ ತಿನಿಸುಗಳ ಅಹಾರ ಮೇಳ ಸಾವಿರಾರು ಜನರು ಪಾಲ್ಗೊಳ್ಳುವುದರೊಂದಿಗೆ ಕನ್ನಡಿಗರ ಮೆಚ್ಚುಗೆಯನ್ನು ಪಡೆದು ಯಶಸ್ವಿಯಾಗಿತ್ತು. ಈ ಬಾರಿ ನವೆಂಬರ್ 18ರಂದು ಈ ಆಹಾರ ಮೇಳ ನಡೆಯಲಿದೆ. ಇದರಲ್ಲಿ ಎಲ್ಲರೂ ಪಾಲ್ಗೊಳ್ಳಬೇಕಾಗಿ ವಿನಂತಿ.

ನವೆಂಬರ್ 25ರಂದು ವಾರ್ಷಿಕ ಆಟೋಟ ಸ್ಪರ್ಧೆಗಳ, ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಬಹುಮಾನ ವಿತರಣೆ, ವಿಶಿಷ್ಠ ಕನ್ನಡಿಗ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳು ನಡೆಯಲಿವೆ. ಈ ಬಾರಿಯ ವಿಶಿಷ್ಠ ಕನ್ನಡಿಗ ಪ್ರಶಸ್ತಿಯನ್ನು

ಶ್ರೀ ಎನ್.ಎ ಮಾಧವ, ಶ್ರೀ ಬೈಕೆರೆ ನಾಗೇಶ್ ಮತ್ತು ಶ್ರೀಮತಿ ಶಾಲನ್ ಮುರಗೋಡ ಅವರಿಗೆ ನೀಡಲಾಗುತ್ತಿದೆ ಎನ್ನುವ ಸಂತಸದ ವಿಷಯವನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಈ ತಿಂಗಳು ನಡೆಯುತ್ತಿರುವ ಎಲ್ಲಾ ಕಾರ್ಯಕ್ರಮಗಳು ರಾಜ್ಯೋತ್ಸವದ ಅಂಗವಾಗಿ, ದಯವಿಟ್ಟು ಬನ್ನಿ, ಪಾಲ್ಗೊಳ್ಳಿ.

ಸಿ.ಎಂ.ನಾಗರಾಜ
ಪ್ರಧಾನ ಕಾರ್ಯದರ್ಶಿ

### ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**2018 ನವೆಂಬರ್ 11**
ಭಾನುವಾರ
ಬೆಳಿಗ್ಗೆ : 9 ಗಂಟೆಯಿಂದ

**ವಾರ್ಷಿಕ ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು**

**2018 ನವೆಂಬರ್ 18**
ಭಾನುವಾರ
ಬೆಳಿಗ್ಗೆ : 11.00ಗಂಟೆಯಿಂದ

**ಕರ್ನಾಟಕದ ವಿವಿಧ ತಿಂಡಿ ತಿನಿಸುಗಳ "ಕೈರುಚಿ" ಆಹಾರ ಮೇಳ**

**2018 ನವೆಂಬರ್ 25**
ಭಾನುವಾರ
ಸಂಜೆ : 4.00ಗಂಟೆಯಿಂದ

**ಕರ್ನಾಟಕ ರಾಜ್ಯೋತ್ಸವ**
**ವಿಶಿಷ್ಠ ಕನ್ನಡಿಗ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿ ವೇತನ ವಿತರಣೆ ವಾರ್ಷಿಕ ಆಟೋಟ ಮತ್ತು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಬಹುಮಾನ ವಿತರಣೆ, ಸ್ಥಳೀಯ ಕಲಾವಿದರಿಂದ ನೃತ್ಯ ಕಾರ್ಯಕ್ರಮ**

### ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳು

**2018 ನವೆಂಬರ್ 27**
ಮಂಗಳವಾರ
ಪೂರ್ವಾಹ್ನ 11ರಿಂದ ರಾತ್ರಿ 8 ಗಂಟೆಯವರೆಗೆ

**ಕನ್ನಡ ಅಧ್ಯಯನ ಪೀಠ, ಜೆ.ಎನ್.ಯು.ದಿಂದ ರಾಜ್ಯೋತ್ಸವ ಕಾರ್ಯಕ್ರಮ**
**ಸ್ಥಳ : ಕನ್ವೆನ್ಷನ್ ಸೆಂಟರ್, ಸಭಾಂಗಣ–1 ಜೆ.ಎನ್.ಯು.**
**ಕರ್ನಾಟಕದ ಪರಿಕಲ್ಪನೆ ವಿಷಯದ ಕುರಿತು ವಿಚಾರ ಸಂಕಿರಣ ಮತ್ತು ಶುಭಾ ಧನಂಜಯ ತಂಡದಿಂದ ನೃತ್ಯ ಕಾರ್ಯಕ್ರಮ**

### ಉಪನ್ಯಾಸ ಮಾಲೆ



**ಡಾ. ಭೀಮ ಭಟ್**
**ಅವರಿಂದ "ವನಸ್ಪತಿಗಳ ಉಪಯೋಗ-2" ಕುರಿತು ಉಪನ್ಯಾಸ**

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ **ಡಾ. ಭೀಮ ಭಟ್** ಅವರು ಮೂರು ದಶಕಗಳಿಂದ ಪ್ರತೀ ತಿಂಗಳ ಕೊನೆಯ ಭಾನುವಾರ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದಾರೆ.
**ನವೆಂಬರ್ 25ರ ಭಾನುವಾರ ಅಪರಾಹ್ನ 3.00 ರಿಂದ 4.30 ರವರೆಗೆ ಹಾಗೂ ಸಂಜೆ : 4.30 ರಿಂದ 5.30 ರವರೆಗೆ ಉಚಿತ ವೈದ್ಯಕೀಯ ಸಲಹೆಯನ್ನು** ನೀಡಲಿದ್ದಾರೆ. ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ನವೆಂಬರ್, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ನವೆಂಬರ್, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25 ನವೆಂಬರ್, 2018ರಂದು ಬೆಳಿಗ್ಗೆ 11 ಗಂಟೆಯಿಂದ

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 29 ಸಂಚಿಕೆ 2
ನವೆಂಬರ್ 2018

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ನಮ್ಮ ಭಾಷೆಯನ್ನು ಮುಂದಿನ ತಲೆಮಾರಿಗೆ ತಲುಪಿಸುವ ಜವಾಬ್ದಾರಿ ನಮ್ಮ ಮೇಲಿದೆ

ಪ್ರತಿಯೊಂದು ಜೀವಿಯೂ ತನ್ನದೇ ಆದ 'ಭಾಷೆ'ಯೊಂದನ್ನು ಹೊಂದಿದೆ. ಕ್ರಿಮಿಕೀಟಗಳಿಂದ ತೊಡಗಿ ವಾನರ ಪ್ರಾಣಿಗಳು ತಮ್ಮದೇ ಆದ ಸಂಕೇತ ಮತ್ತು 'ಭಾಷೆ'ಗಳನ್ನು ಉಪಯೋಗಿಸಿ ಮಾಹಿತಿಗಳನ್ನು ಒಂದು ಜೀವಿಯಿಂದ ಇನ್ನೊಂದು ಜೀವಿಗೆ ತಿಳಿಸುತ್ತವೆ. ಕಾಡಿನಲ್ಲಿರುವ ಕೋತಿಯೊಂದು ಹುಲಿ ಅಥವಾ ಚಿರತೆಯನ್ನು ಕಂಡು ತನ್ನ ಇತರ ಸಹಚರಿ ಪ್ರಾಣಿಗಳಿಗೆ ಸೂಚಿಸಲು ತನ್ನದೇ ಆದ ವಿಶಿಷ್ಟವಾದ ಶಬ್ದವನ್ನು ಹೊರಡಿಸುತ್ತದೆ. ಅಂತಹ ಶಬ್ದಗಳನ್ನು ಕೇಳಿದ ಇತರ ಕೋತಿಗಳು ಎಚ್ಚರವಹಿಸಿ ಸುರಕ್ಷಿತ ಜಾಗಕ್ಕೆ ಧಾವಿಸುತ್ತವೆ. ಪ್ರಾಣಿಗಳು ತಮ್ಮ ಕಣ್ಣಿಗೆ ಗೋಚರವಾಗುವ ವಿಷಯಗಳ ಕುರಿತು ಮಾತ್ರ ತಮ್ಮ 'ಭಾಷೆ'ಯಲ್ಲಿ ಸಂವಹಿಸುತ್ತವೆ. ಆದರೆ ಮನುಷ್ಯ ಜೀವಿ ಮಾತ್ರ ತನ್ನ ಕಣ್ಣಿಗೆ ಕಾಣದಿರುವ ವಿಷಯಗಳ ಕುರಿತು ಕೂಡಾ ಚಿಂತಿಸಬಲ್ಲ ಮತ್ತು ಅದನ್ನು ವ್ಯಕ್ತಪಡಿಸಬಲ್ಲ. ತನ್ನ ಭಾವನೆಗಳನ್ನು ಸಹಚರರೊಂದಿಗೆ ಹಂಚಲು ಶಬ್ದಗಳನ್ನು ಸೃಷ್ಟಿಸಿದ. ಅನಾದಿ ಕಾಲದಿಂದಲೂ ಮನುಷ್ಯನ ಮಿದುಳಿನಲ್ಲಿ ಅಸಂಖ್ಯಾತ ವಿಚಾರಗಳು ಸ್ಫುಟಿಸುತ್ತಿದ್ದರೂ ಅವುಗಳನ್ನು ಉಳಿಸಿಕೊಳ್ಳಲು ಬಹಳಷ್ಟು ಕಾಲದ ವರೆಗೆ ಸಾಧ್ಯವಾಗಲಿಲ್ಲ. ವ್ಯಕ್ತಿಯೊಬ್ಬ ಸತ್ತಾಗ ಮಿದುಳಿನೊಳಗಿದ್ದ ವಿಚಾರಗಳು ಕೂಡಾ ಸತ್ತು ಹೋದವು. ಮಿದುಳಿನೊಳಗಿನ ವಿಚಾರಗಳನ್ನು ಸ್ಥಾಯಿಗೊಳಿಸಲು ಮನುಷ್ಯ ಸಂಕೇತಗಳನ್ನು ಮತ್ತು ಚಿತ್ರಗಳನ್ನು ಬರೆಯಲು ಆರಂಭಿಸಿದ. ಆದರೆ ಇಂತಹ ಬರವಣಿಗೆಗಳಲ್ಲಿ ತನ್ನ ಮಿದುಳಲ್ಲಿರುವ ಅಪಾರವಾದ ವಿಚಾರಗಳನ್ನು ತಂದಿಡಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ಸಣ್ಣ ಸಣ್ಣ ಸಂಕೇತಗಳನ್ನು ಉಪಯೋಗಿಸಲು ಕಲಿತ. ಮನುಷ್ಯನ ಮಿದುಳು ಅದೆಷ್ಟೋ ವಿಷಯಗಳನ್ನು ಸಂಗ್ರಹಿಸಿಡುತ್ತಿದ್ದರೂ ಕಾಲಕ್ರಮೇಣದಲ್ಲಿ ಕೆಲವೊಂದು ವಿಷಯಗಳು ಸ್ಪಷ್ಟತೆಯನ್ನು ಕಳೆದುಕೊಳ್ಳುತ್ತಿದ್ದವು. ಅದಕ್ಕಾಗಿ ಮನುಷ್ಯನು ಒಬ್ಬನಿಗಿಂತ ಹೆಚ್ಚು ಜನರ ನಡುವೆ ನಡೆಯುವಂತಹ ವ್ಯವಹಾರಗಳನ್ನು ಆವೆಮಣ್ಣಿನ ತಟ್ಟೆಗಳನ್ನು ಮಾಡಿ ಅದರಲ್ಲಿ ಬರೆದಿಡಲು ಆರಂಭಿಸಿದ. ಕಾವ್ಯ, ಇತಿಹಾಸ, ಪ್ರಣಯ, ಕಲೆ ಅಥವಾ ಧಾರ್ಮಿಕ ಉಪದೇಶಗಳನ್ನು ಬರೆಯಲು ಆರಂಭಿಸುವುದಕ್ಕಿಂತ ಮೊದಲು ಮನುಷ್ಯನು ತನ್ನ ಬಳಿ ಇದ್ದ ಸಂಪತ್ತಿನ ಲೆಕ್ಕಗಳನ್ನು ಬರೆದಿಡುತ್ತಿದ್ದ ಎಂದು ಸಂಶೋಧಕರು ತಿಳಿಸುತ್ತಾರೆ. ಮಾನವನ ಸಂತತಿ ಭೂಮಿಯಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಪಸರಿಸಿದಂತೆ ಆಡುವ ಭಾಷೆಯಲ್ಲಿಯೂ ಬದಲಾವಣೆಗಳು ಕಂಡು ಬಂದವು. ಭೌಗೋಳಿಕವಾಗಿ ವಿವಿಧ ಭಾಷೆಗಳು ಬೆಳೆಯಲು ಆರಂಭವಾದವು. ಜಾಗತಿಕವಾಗಿ ಸುಮೇರಿಯನರು, ಈಜಿಪ್ತಿನವರು, ಚೀನಿಯರು ಭಾಷೆಗಳನ್ನು ಬೆಳೆಸಿದರು. ಏಶ್ಯಾಖಂಡದಲ್ಲಿ ಪಾಲಿ, ಪ್ರಾಕೃತ, ಸಂಸ್ಕೃತ ಭಾಷೆಗಳ ಜತೆಗೆ ತಮಿಳಿನಂತಹ ದ್ರಾವಿಡ ಭಾಷೆಗಳೂ ಕ್ರಿಸ್ತಪೂರ್ವದಿಂದಲೇ ಬೆಳವಣಿಗೆಯಲ್ಲಿತ್ತು ಎಂಬುದಕ್ಕೆ ಆಧಾರಗಳು ದೊರೆತಿವೆ. ಇಂದು ಕೂಡಾ ಬಹಳ ಕ್ರಿಯಾಶೀಲವಾಗಿ ಜೀವಂತವಾಗಿರುವ ಜಗತ್ತಿನ ಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದು. ಕನ್ನಡದ ಕಾವ್ಯ ಮತ್ತು ಸಾಹಿತ್ಯವನ್ನು ಒಂದು ಕಾಲಘಟ್ಟಕ್ಕೆ ಅನ್ವಯಿಸುವಂತೆ ಸಂಶೋಧನೆಗಳು ತಿಳಿಸುತ್ತವೆ. ಒಂದು ಭಾಷೆಯಲ್ಲಿ ಸಾಹಿತ್ಯ ಕಾವ್ಯಗಳು ಹುಟ್ಟುವುದಕ್ಕಿಂತ ಅದೆಷ್ಟೋ ಶತಮಾನಗಳಷ್ಟು ಹಿಂದೆ ಆ ಭಾಷೆ ಜನರ ಆಡುಭಾಷೆಯಾಗಿ ಬೆಳೆದಿರಬೇಕಾಗುತ್ತದೆ. ಅಲ್ಲದೇ ಭಾಷೆಯೊಂದು ಬರವಣಿಗೆಯಾಗಲು ಕೂಡಾ ಅದೆಷ್ಟೋ ಶತಮಾನಗಳ ಕಾಲ ತಗಲಿರಬಹುದು. ಜತೆಗೆ ಬೇರೆ ಬೇರೆ ಸಂಸ್ಕೃತಿಗಳ ಸಂಪರ್ಕಗಳಿಂದ ಭಾಷೆಯು ತನ್ನ ಆರಂಭಿಕ ಘಟ್ಟದಿಂದ ಇಂದಿನ ವರೆಗೆ ಬೆಳೆಯಲು ಹಲವು ರೂಪಗಳನ್ನೂ ಪಡೆದಿರಬಹುದು. ಇಂತಹ ಸಹಸ್ರಮಾನಗಳಷ್ಟು ಇತಿಹಾಸವಿರುವ ಕನ್ನಡ ಭಾಷೆಯನ್ನು ಮಾತನಾಡುವ ನಾವೆಲ್ಲರು ಒಂದು ಪರಂಪರೆಯ ಕೊಂಡಿಯಾಗಿದ್ದೇವೆ. ನಮ್ಮ ಭಾಷೆಯನ್ನು ಮುಂದಿನ ತಲೆಮಾರಿಗೆ ತಲುಪಿಸುವ ಜವಾಬ್ದಾರಿ ನಮ್ಮ ಮೇಲಿದೆ. ನಾವೆಲ್ಲರೂ ಹೊರನಾಡಿನಲ್ಲಿದ್ದು ನಮ್ಮ ಮನೆಗಳ ಒಳಗೆ ಮತ್ತು ಹೊರಗೆ ಅದೆಷ್ಟೋ ಬೇರೆ ಬೇರೆ ಭಾಷೆಗಳನ್ನು ನಮ್ಮ ಕಿವಿಗಳಲ್ಲಿ ಕೇಳುತ್ತಾ ನಮ್ಮದೇ ಕನ್ನಡದಲ್ಲಿ ವ್ಯವಹರಿಸುವುದು ಮಾತ್ರವಲ್ಲ ಕಾವ್ಯಗಳನ್ನು ಕೂಡ ನಾವು ಬರೆಯುವೆವು. ಯಾಕೆಂದರೆ ಕವಿರಾಜಮಾರ್ಗದಲ್ಲಿ ಶ್ರೀವಿಜಯನೇ ಹೇಳಿದ್ದಾನೆ:

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್।

ಬಾಲಕೃಷ್ಣ ನಾಯ್ಕ್ ಡಿ.

# ವಿದೂಷಿ ರೇಣುಕಾ ನಾಕೋಡ್ ಅವರಿಂದ ಹಿಂದೂಸ್ತಾನಿ ಸಂಗೀತ






ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಅಕ್ಟೋಬರ್ 7ರಂದು ವಿದೂಷಿ ರೇಣುಕಾ ನಾಕೋಡ್ ಅವರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸುಮಾರು ಒಂದು ಗಂಟೆಯವರೆಗೆ ತಮ್ಮ ಸಮುಧುರ ಕಂಠದಿಂದ ಸುಶ್ರಾವ್ಯವಾಗಿ ಹಾಡಿ ದೆಹಲಿಯ ಕನ್ನಡಿಗರ ಮನಸೂರೆಗೊಳಿಸಿದರು. ವಿದುಷಿ ನಾಕೋಡ್ ಅವರು ಮೂಲತ: ಸಂಗೀತ ಕುಟುಂಬದಿಂದ ಬಂದವರು. 2009ರಿಂದ ಧಾರವಾಡದ ಆಕಾಶವಾಣಿಯಲ್ಲಿ ಲಘು ಸಂಗೀತದಲ್ಲಿ ಟಾಪ್‌ಗ್ರೇಡ್ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ (ವೋಕಲ್)ನಲ್ಲಿ ಬಿ.ಹೈಗ್ರೇಡ್ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸ್ವರಧಾಮಿನಿ ಪ್ರಶಸ್ತಿ–1998, ಪಂಡಿತ್ ಪುಟ್ಟರಾಜ್ ಕೃಪಾ ಭೂಷಣ್–2003 ಪ್ರಶಸ್ತಿ, ಗಾಯನ ಕುಸುಮ–2003 ಪ್ರಶಸ್ತಿ, ಗಾಯನಶ್ರೀ ಪ್ರಶಸ್ತಿ–2008, ಸಂಗೀತ ನೃತ್ಯಅಕಾಡೆಮಿ ಬೆಂಗಳೂರು ಅವರು ನೀಡುವ ನಮ್ಮ ಸಾಧಕರು ಪ್ರಶಸ್ತಿ–2016 ಹೀಗೆ ಹತ್ತು ಹಲವಾರು ಪ್ರಶಸ್ತಿಗಳನ್ನು ಇವರು ಪಡೆದಿದ್ದಾರೆ. ರೇಣುಕಾ ನಾಕೋಡ್ ಅವರಿಗೆ ತಬಲಾದಲ್ಲಿ ಪಂಡಿತ್ ರಘುನಾಥ್ ನಾಕೋಡ್ ಹಾಗೂ ಹಾರ್ಮೋನಿಯಂನಲ್ಲಿ ಪಂಚಾಕ್ಷರಯ್ಯ ಹಿರೇಮಠ್ ಅವರು ಸಾಥ್ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಕಲಾವಿದರನ್ನು ಅಭಿನಂದಿಸಲಾಯಿತು.

**ಅಭಿಮತ ವರದಿ**

# ಸಾಮಾಜಿಕ ಚಿಂತನೆಯ ದಕ್ಷ ಐಪಿಎಸ್ ಅಧಿಕಾರಿ- ಭಾಸ್ಕರ ರಾವ್

"ಕರ್ನಾಟಕದಲ್ಲೇ ಕನ್ನಡ ಶಾಲೆಗಳು ಮುಚ್ಚಿ ಹೋಗ್ತಾ ಇದ್ರೆ, ದೂರದ ದೆಹಲಿಯಲ್ಲಿ ಕನ್ನಡ ಶಾಲೆ ನಡೆಸ್ತಿದ್ದೀರಲ್ರಿ; ಮೆಚ್ಚ್‌ಬೇಕು ದೆಹಲಿ ಕನ್ನಡಗರನ್ನ" ಎನ್ನುತ್ತಲೇ ನೆನಪಿಗೊಂದು ಭಾವಚಿತ್ರವನ್ನು ತೆಗೆಯಿಸಿಕೊಂಡ ಅಪ್ಪಟ ಕನ್ನಡಿಗ, ಕರ್ನಾಟಕ ಐಪಿಎಸ್ ಅಧಿಕಾರ ಎಡಿಜಿಪಿ, ಭಾಸ್ಕರ ರಾವ್ ಕ್ಷಣದಲ್ಲೇ ಜನಸಾಮಾನ್ಯರೊಡನೆ ಬೆರೆಯುವ ಚಾಕಚಕ್ಯತೆ ಹೊಂದಿದ ಸರಳ ವ್ಯಕ್ತಿ. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರಿಗೆ ಬಹಳ ವರ್ಷಗಳ ಪರಿಚಯ. ಭಾಸ್ಕರ ರಾವ್ ಅವರು ದೆಹಲಿಗೆ ಬಂದ ವಿಚಾರ ತಿಳಿದು ದೆಹಲಿ ಕನ್ನಡ ಶಾಲೆ ಹಾಗೂ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡುವಂತೆ ವಿನಿಂತಿಸಿಕೊಂಡಿದ್ದರು. ತಮ್ಮ ಕೆಲಸ ಕಾರ್ಯಗಳನ್ನು ಮುಗಿಸಿ ವಿಮಾನ ನಿಲ್ದಾಣಕ್ಕೆ ಹೋಗುವ ಮುನ್ನ ತಮ್ಮ ವಿರಾಮದ ಒಂದೆರಡು ಗಂಟೆಗಳ ಸಮಯದಲ್ಲಿ ದೆಹಲಿಯ ಕನ್ನಡ ಚಟುವಟಿಕೆಗಳನ್ನು ನೋಡ ಬಂದ ಭಾಸ್ಕರ ರಾವ್, ವೃತ್ತಿನಿಷ್ಠ ಅಧಿಕಾರಿಗಳ ಸಾಮಾಜಿಕ ಕಳಕಳಿಗೆ ಆದರ್ಶಪ್ರಾಯರಾಗುತ್ತಾರೆ. 28.10.2018 ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಆಗಮಿಸಿದ ಆ ಸಮಯದಲ್ಲಿ ಕರ್ನಾಟಕ ಸಂಘದ ಆಟೋಟ ಸ್ಪರ್ಧೆಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಸಿ ಎಂ ನಾಗರಾಜರವರೇ ನಡೆಸುತ್ತಿದ್ದು, ಅವರ ಸಂಘಟನಾ ಶ್ರಮಕ್ಕೆ ಬೆನ್ನು ತಟ್ಟಿ, ದೂರದ ದೆಹಲಿಯಲ್ಲಿ ಕನ್ನಡವನ್ನು ಕಟ್ಟಿ ಬೆಳೆಸುವ ಕನ್ನಡಿಗರನ್ನು ಶ್ಲಾಘಿಸಿ, ತಮ್ಮ ಅನುಭವವನ್ನೂ ಹಂಚಿದಾಗ ಅಲ್ಲಿ ನೆರೆದಿದ್ದ ಎಲ್ಲರಿಗೂ ಆತ್ಮೀಯ ಭಾವ ಮೂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳ ಜೊತೆ ಕುಳಿತು, ಕನ್ನಡ ಶಾಲೆ ಬೆಳೆದು ಬಂದ ರೀತಿಯನ್ನು ತಿಳಿದು ಶ್ಲಾಘಿಸಿದರು.



ಶಿಕ್ಷಣ ಸಂಸ್ಥೆಯಿಂದ ನೇರವಾಗಿ ದೆಹಲಿ ಕರ್ನಾಟಕ ಸಂಘಕ್ಕೂ ಭೇಟಿ ನೀಡಿ ಸಂಘದ ಸಂಪೂರ್ಣ ಚಟುವಟಿಕೆಗಳ ಮಾಹಿತಿ ಪಡೆದರಲ್ಲದೆ, ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ ಎಂ ನಾಗರಾಜರವರು ಮಾಡುತ್ತಿರುವ ಕೆಲಸ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

"ಮೈಸೂರಲ್ಲಿ ಕೆಲವೊಂದು ಸಂದರ್ಭಗಳಲ್ಲಿ ಸಾಹೇಬ್ರೇ ಮುಂದೆ ಬಂದು ಲಾಠಿ ಹಿಡ್ಕೊಂಡು ನಿಂತಾಗಲೇ, ಪೋಲೀಸ್ ಬಲ ಕಡಿಮೆ ಇದ್ರೂ ಅಷ್ಟೊಂದು ಜನರನ್ನ ನಿಯಂತ್ರಿಸೋದಕ್ಕೆ ಸಾಧ್ಯವಾಯಿತು" ಎನ್ನುತ್ತಾ ಬಹಳ ಹೆಮ್ಮೆಯಿಂದಲೇ ಭಾಸ್ಕರ ರಾವ್ ಅವರ ವೃತ್ತಿ ಸಾಮರ್ಥ್ಯವನ್ನು ನೆನಪಿಸಿಕೊಂಡ ವಾರ್ತಾ ಮತ್ತು ಪ್ರಸಾರ ಇಲಾಖೆಯ ಅಧಿಕಾರಿ ಗಿರೀಶ್ ಅವರು, ಅವರ ಧೈರ್ಯ ಸಾಹಸಗಳನ್ನು ವಿವರಿಸಿ, ಸಮಾಜಪರ ಚಿಂತನೆಯನ್ನು ವಿವರಿಸಿದರು.

ಪಂಜಾಬ್, ಪೂಂಚ್, ರಾಜೋರಿ ವಿಭಾಗಗಳಲ್ಲಿ ಭಯೋತ್ಪಾದನೆ ಹತ್ತಿಕ್ಕುವಲ್ಲಿ ಸಮರ್ಥ ಕಾರ್ಯಾಚರಣೆಗಳನ್ನು ನಡೆಸಿದ ಭಾಸ್ಕರ ರಾವ್ ವಿಶೇಷ ಸಂರಕ್ಷಣಾ ದಳ, ರಾಷ್ಟ್ರೀಯ ಭದ್ರತಾ ಪಡೆಯಲ್ಲೂ ಸೈ ಎನಿಸಿಕೊಂಡವರು.

1990ರಲ್ಲಿ ಕರ್ನಾಟಕ ಕೇಡರ್‌ನಲ್ಲಿ ಭಾರತೀಯ ಪೋಲೀಸ್ ಸೇವೆಗೆ ಸೇರಿದ ಭಾಸ್ಕರ ರಾವ್ ತಮ್ಮ ಅಪ್ರತಿಮ ಮುಖಂಡತ್ವ, ದಕ್ಷ ಆಡಳಿತ, ಗುಣವನ್ನು ಹೊಂದಿದ್ದು ಕ್ರೀಡೆಗಳಲ್ಲಿ ಕೂಡ ಅಸಾಧಾರಣ ಪ್ರತಿಭೆ ಎಂಬುದಕ್ಕೆ ದೇಶದ ಹಲವಾರು ನಗರಗಳಲ್ಲಿ ಆಯೋಜಿಸಲಾದ ಸುದೀರ್ಘ ಓಟಗಳ- ಸ್ಪರ್ಧೆಗಳಲ್ಲಿ ಅವರ ಭಾಗವಹಿಸುವಿಕೆಯೇ ಸಾಕ್ಷಿ. ಪರಿಸರ ಸಂರಕ್ಷಣೆಯೂ ಸೇರಿದಂತೆ ಹಲವಾರು ಸಮಾಜಮುಖಿ ಕಾರ್ಯಗಳಿಗೆ ಪ್ರೋತ್ಸಾಹ ಬೆಂಬಲ ನೀಡುವುದೆಂದರೆ ಅವರಿಗೆ ಅವರ ನೆಚ್ಚಿನ ಪುಸ್ತಕಗಳನ್ನು ಓದುವಷ್ಟೇ ಇಷ್ಟ.

ಚೆನ್ನೈಯಲ್ಲಿ ಜನಿಸಿದ ಭಾಸ್ಕರ ರಾವ್, ಬೆಂಗಳೂರು ಸೇರಿದಂತೆ ದಕ್ಷಿಣ ಭಾರತದಲ್ಲಿ ಮಾತ್ರವಲ್ಲ ಉತ್ತರ ಭಾರತದಲ್ಲೂ ವಿದ್ಯಾಭ್ಯಾಸವನ್ನು ಮಾಡಿ, ಅಲ್ಲಿಯ ಭಾಷೆ, ಜನ–ಮನ–ಸಂಸ್ಕೃತಿಯ ನೇರ ಪರಿಚಯ ಹೊಂದಿರುವುದರಿಂದಲೇ ಅವರ ಅನುಭವವು, ಆಡಳಿತ ಮತ್ತು ಅಧಿಕಾರಕ್ಕೆ ನೆರವಾಗಿದೆ ಎಂಬುದು ದೆಹಲಿ ಕನ್ನಡಿಗರಿಗೆ ಒಂದರಡು ಗಂಟೆಗಳ ಅವರ ಭಾಗವಹಿಸುವಿಕೆಯಿಂದಲೇ ಅರ್ಥವಾಗಿದೆ.

**ಸರವು ಕೃಷ್ಣ ಭಟ್**

# ಭೀಮರಾವ್ ಮುರಗೋಡ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ




ಅಂತರರಾಷ್ಟ್ರೀಯ ಖ್ಯಾತಿಯ ಚಿತ್ರ ಕಲಾವಿದ ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷ ಭೀಮರಾವ್ ಮುರಗೋಡ ಅವರು ಇದೇ ಅಕ್ಟೋಬರ್ ಐದರಂದು ಬೆಂಗಳೂರಿನಲ್ಲಿ ಅನಾರೋಗ್ಯದಿಂದ ನಿಧನರಾದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ನವೆಂಬರ್ 4ರಂದು ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಈ ಸಂದರ್ಭದಲ್ಲಿ ಮಾತನಾಡಿ ಮುರಗೋಡ ಅವರು ಒಬ್ಬ ಚಿತ್ರಕಾರ ಮತ್ತು ಅವರ ವ್ಯಕ್ತಿತ್ವ ವಿಶಿಷ್ಟವಾಗಿತ್ತು ಎಂದರು. ಅವರೊಬ್ಬ ಸಂತರ ಹಾಗೇ ಕಾಣುತ್ತಿದ್ದರು. ಸದಾ ಅಂತರಂಗದಲ್ಲಿ ನಮ್ಮೆಲ್ಲರ ಮೇಲೆ ಪ್ರೀತಿಯನ್ನು ತುಂಬಿಕೊಂಡಿದ್ದ ಅವರು ಮೌನಿಯಾಗಿ ಎಷ್ಟು ಬೇಕೋ ಅಷ್ಟೇ ಮಾತುಕತೆಯ ಮೂಲಕ ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದರು ಎಂದರು.

ಅವರೊಬ್ಬರೇ ಕಲಾವಿದರಲ್ಲ, ಅವರ ಕುಟುಂಬವೇ ಕಲಾವಿದರ ಕುಟುಂಬವಾಗಿದೆ. ಮುರಗೋಡ ಅವರು ದೇಶದ ಹಲವು ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳ ವ್ಯಕ್ತಿಚಿತ್ರಗಳನ್ನು ರಚಿಸಿರುವರಲ್ಲದೇ ಅಂತರಾಷ್ಟ್ರೀಯ ನಾಯಕರ ಚಿತ್ರಗಳನ್ನು ರಚಿಸಿ ಖ್ಯಾತರಾಗಿದ್ದಾರೆ. ಒಂದು ಸಮಯದಲ್ಲಿ ದೆಹಲಿಯ ಕನ್ನಡ ಕಲಾವಿದರ ಸಾಲಿನಲ್ಲಿ ಮೊದಲಿಗರಾಗಿದ್ದ ಸಂದರ್ಭದಲ್ಲಿ ಅವರ ಕುರಿತು ಅಭಿಮತದಲ್ಲಿಯೂ ನುಡಿಚಿತ್ರವನ್ನು ಬರೆಯಲಾಗಿತ್ತು ಎಂದು ಶ್ರೀ ವಸಂತ ಶೆಟ್ಟಿಯವರು ತಿಳಿಸಿದರು. ಇವತ್ತು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಸಂದರ್ಭವೂ ಸುಯೋಜಿತವಾಗಿದೆ. ಯಾಕೆಂದರೆ ದೆಹಲಿಯ ಕನ್ನಡ ಭಾರತಿಯಲ್ಲಿ ಬಿ.ವಿ. ಕಾರಂತ ಅವರ ಜತೆ ಹಲವು ನಾಟಕಗಳಲ್ಲಿ ನಟನಾಗಿ ಕೆಲಸ ಮಾಡಿರುವ ಮುರಗೋಡ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಕಾರಂತರ ಜೀವನದ ಕುರಿತಾದ ನಾಟಕ ನಡೆಯುತ್ತಿದೆ. ಕಾರಂತರೇ ನಿರ್ದೇಶಿಸಿದ ಸತ್ತವರ ನೆರಳು ನಾಟಕದ ಪ್ರದರ್ಶನ ನಿನ್ನೆಯಷ್ಟೇ ನಡೆಯಿತು ಎಂದು ಶ್ರೀ ವಸಂತ ಶೆಟ್ಟಿಯವರು ವಿವರಿಸಿದರು.

ಈ ಕಾರ್ಯಕ್ರಮದಲ್ಲಿಖ್ಯಾತ ಚಲನಚಿತ್ರ ನಿರ್ದೇಶಕ ಹಾಗೂ ರಂಗಕರ್ಮಿ ಟಿ.ಎಸ್. ನಾಗಾಭರಣ ಮತ್ತು ಬೆಂಗಳೂರಿನ ಬೆನಕ ತಂಡದ ಚಂದ್ರು ಅವರು ಉಪಸ್ಥಿತರಿದ್ದರು.

ಆರಂಭದಲ್ಲಿ ಸಂಘದ ಸಮಿತಿ ಸದಸ್ಯ ಹಾಗು ಮುರಗೋಡ ಅವರ ಬಹುಕಾಲದ ಒಡನಾಡಿಯಾಗಿರುವ ಶ್ರೀ ವಿ.ವಿ.ಬಿರಾದಾರ ಅವರು ಮಾತನಾಡಿ ಭೀಮರಾವ್ ಮುರಗೋಡ ಅವರ ಜೊತೆಗಿನ ತಮ್ಮ ಒಡನಾಟದ ಅನುಭವಗಳನ್ನು ಹಂಚಿಕೊಂಡರು. ಒಬ್ಬ ಹೆಸರಾಂತ ಚಿತ್ರ ಕಲಾವಿದ ಆದರೂ ಭೀಮರಾವ್ ಮುರಗೋಡ ಅವರಿಗೆ ಸಮಾಜದಲ್ಲಿನ ಬಡಜನರ ಬಗ್ಗೆ ಅಪಾರ ಕಳಕಳಿಯಿತ್ತು. ಒಂದೇ ಮುಖದ ಕಲಾಕೃತಿಯಲ್ಲಿ ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಅವರನ್ನು ಮೂಡಿಸಿ ಅವರ ತತ್ವಗಳನ್ನು ಅದರಲ್ಲಿ ಬಿಂಬಿಸಿದ್ದಾರೆ ಎಂದು ಶ್ರೀ ಬಿರಾದಾರ ಅವರು ವಿವರಿಸಿದರು. ಅವರು ಬಡಕುಟುಂಬದಿಂದ ಬಂದವರಾದರೂ ಒಂದು ಸಮಾಜದ ಏಳಿಗೆಗಾಗಿ ಅಪಾರವಾಗಿ ಶ್ರಮಿಸುತ್ತಿದ್ದರು. ನಾನು ಮತ್ತು ಅವರು ಸೈಕಲ್ ಮೇಲೆ ದೆಹಲಿಯ ವಿವಿಧ ಭಾಗಗಳಿಗೆ ಹೋಗಿ ಬಡವರ್ಗದವರನ್ನು ಭೇಟಿಯಾಗಿ ಅವರ ಕಷ್ಟಸುಖಗಳಿಗೆ ಸ್ಪಂದಿಸುತ್ತಿದ್ದೆವು ಎಂದು ಅವರು ಶ್ರದ್ಧಾಂಜಲಿಯನ್ನು ಅರ್ಪಿಸಿದರು.

**ಅಭಿಮತ ವರದಿ**

## ತುಂಬು ಜೀವನ ಬದುಕಿದ ಭೀಮರಾವ್ ಮುರಗೋಡ

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಸಿಂದಿಕುರುಬೇಟ ಗ್ರಾಮದಲ್ಲಿ ಮಾರ್ಚ್ 1, 1945ರಲ್ಲಿ ಭೀಮರಾವ್ ಮುರಗೋಡ ಅವರು ಜನಿಸಿದರು. ಅವರ ತಂದೆ ಫಕೀರಪ್ಪ, ತಾಯಿ ಎಲ್ಲವ್ವ. ಫಕೀರಪ್ಪ ದಂಪತಿಗೆ ಮೂವರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು. ಶಾಂತವೀರಪ್ಪ, ಈಶ್ವರಪ್ಪ, ಮತ್ತು ಭೀಮರಾವ್ ಮೂವರೂ ಕಲೆಯಲ್ಲಿ ತರಬೇತಿ ಶಿಕ್ಷಣ ಪಡೆದವರು. ಹೆಣ್ಣು ಮಕ್ಕಳು ನಾಗಮ್ಮ, ಗೌರಮ್ಮ ಮತ್ತು ಸಾವೂಬಾಯಿ (ನಿರ್ಮಲ).


ಭೀಮರಾವ್ ಅವರು ಗೋಕಾಕ ಮುನಿಸಿಪಲ್ ಹೈಸ್ಕೂಲ್‌ನಲ್ಲಿ ಐದನೇ ಈಯತ್ತೆಯವರೆಗೆ ಅಭ್ಯಸಿಸಿದರು. ಮುಂದಿನ ವ್ಯಾಸಂಗಕ್ಕೆ ಧಾರವಾಡ ಕರ್ನಾಟಕ ಹೈಸ್ಕೂಲು ಸೇರಿದರು. ಅವರು ದೊಡ್ಡ ಕಲಾವಿದರು ಮತ್ತು ಸಮಾಜೋದ್ಧಾರಕರನ್ನು ಕಂಡು ಅವರಂತೆ ಆಗುವ ಕನಸು ಕಂಡರು. ಮೆಟ್ರಿಕ್ ಮುಗಿಸಿದ ನಂತರ ಅವರು ಅಣ್ಣಂದಿರಂತೆ ಚಿತ್ರಕಲೆಯ ದಾರಿಯಲ್ಲಿ ಸಾಗಿದರು. ಅವರು 'ತೈಲವರ್ಣ ಭಾವಚಿತ್ರ ಕಲೆ' ಹಾಗೂ ಸೂಕ್ಷ್ಮ ತೈಲವರ್ಣ ಚಿತ್ರಕಲೆ (ಪೋರ್ಟ್‌ರೇಟ್ ಪೇಂಟಿಂಗ್ ಆಂಡ್ ಮಿನಿಯೇಚರ ಆರ್ಟ್)ಯಲ್ಲಿ ಪಾರಂಗತರಾದರು. 1974ರಲ್ಲಿ ಶಾಲನ್‌ಳೊಂದಿಗೆ ಅವರ ವಿವಾಹವಾಯಿತು.

ಬೆಂಗಳೂರಿನ ಗಾಂಧಿ ಭವನದಲ್ಲಿ ಭೀಮರಾವ್ ಅವರ ಪ್ರಥಮ ಚಿತ್ರ ಪ್ರದರ್ಶನ ನಡೆಯಿತು. ಮುಂದೆ ಅಕ್ಟೋಬರ್ 2, 1969ರಲ್ಲಿ ದೆಹಲಿಯ ರಾಜಘಾಟಿನ ಗಾಂಧಿ ದರ್ಶನ ಪೆವಿಲಿಯನ್‌ನಲ್ಲಿ ಭೀಮರಾವ್ ಚಿತ್ರಗಳು ಪ್ರದರ್ಶನಗೊಂಡವು. ದೆಹಲಿಯ ಕೇಂದ್ರ ಲಲಿತಕಲಾ ಅಕಾಡೆಮಿ ಎಲ್ಲ ರಾಜ್ಯಗಳ ರಾಜಧಾನಿಗಳಲ್ಲಿ ಆಯೋಜಿಸಿದ ಚಿತ್ರಕಲಾ ಮೇಳಗಳಲ್ಲಿ ಮುರಗೋಡ್ ಅವರ ಚಿತ್ರಗಳು ಪ್ರದರ್ಶನಗೊಂಡಿವೆ. ಕೊಲ್ಕತ್ತಾ, ಚೆನ್ನೈ, ದೆಹಲಿ, ಬೆಂಗಳೂರು ಮಹಾನಗರಗಳಲ್ಲಿ ನಡೆದ ಚಿತ್ರಕಲಾ ಪ್ರದರ್ಶನದಲ್ಲಿ ಅವರ ಕೃತಿಗಳಿಗೆ ಅಗ್ರಸ್ಥಾನ ದೊರೆತಿದೆ.

ದೇಶ-ವಿದೇಶಗಳ ಹಲವಾರು ಭಾಷೆಗಳ ಗ್ರಂಥಗಳಿಗೆ ಮುರುಗೋಡ ಅವರು ಮುಖಚಿತ್ರ ಹಾಗೂ ರೇಖಾಚಿತ್ರ ಕೂಡ ಬರೆದಿದ್ದಾರೆ. ದೆಹಲಿಯ ಅನೇಕ ಕನ್ನಡ ಸಂಘ-ಸಂಸ್ಥೆಗಳಿಗೆ ತಮ್ಮ ಸ್ವರಚಿತ ಕಲಾಕೃತಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘದ ಲಾಂಛನ ಇವರಿಂದಲೇ ರಚಿತವಾದುದು ಗಮನಾರ್ಹ.

ಮುರಗೋಡ್ ಅವರು 1983ರಲ್ಲಿ ತೈಲವರ್ಣ ಭಾವಚಿತ್ರ ಹಾಗೂ ಸೂಕ್ಷ್ಮ ತೈಲವರ್ಣಗಳ ವಿಶೇಷ ಅಧ್ಯಯನಕ್ಕಾಗಿ ಪ್ರಪಂಚದ ಸುಂದರ ದೇಶ ಫ್ರಾನ್ಸ್‌ಗೆ ಸೋದರರೊಂದಿಗೆ ತೆರಳಿದರು. ಅವರು ದೇಶ-ವಿದೇಶಗಳ ಗಣ್ಯ ಮಹಾನುಭಾವರನ್ನು ಎದುರಿಗೆ ಕುಳ್ಳಿರಿಸಿಕೊಂಡು ಬಿಡಿಸಿದ ವಿಶಿಷ್ಟ ಭಾವಚಿತ್ರಗಳೂ ಲೆಕ್ಕ ಮೀರಿವೆ.

ಮುರಗೋಡ್ ಅವರು ಚಿತ್ರಕಲೆಯನ್ನಲ್ಲದೆ ನಟ, ನಾಟಕಕಾರ, ನಿರ್ದೇಶಕ, ಚಲನಚಿತ್ರ ತಾರೆ, ಕಿರುತೆರೆಯ ನಟ, ಸಮಾಜಸೇವಕ ಹಾಗೂ ಲೇಖಕರಾಗಿಯೂ ತಮ್ಮ ಬಹುಮುಖಿ ವ್ಯಕ್ತಿ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಅವರು ತಮ್ಮ ವಿನೂತನ ಶೈಲಿಯ ನಾಟಕಾಭಿನಯದಿಂದ ಶಿವರಾಮ ಕಾರಂತ, ಬಿ.ವಿ. ಕಾರಂತ, ಗಿರೀಶ್ ಕಾರ್ನಾಡ್‌ರಂಥವರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಮಣ್ಣಿನ ಮಗ, ಸಿಂಧೂರಲಕ್ಷ್ಮಣ, ಶಾಂತಲಾ, ಆದಿಶಂಕರಾಚಾರ್ಯ ಚಲನಚಿತ್ರಗಳಲ್ಲಿ ವಿಭಿನ್ನ ಮನೋಧರ್ಮದ ನಾನಾ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಅವರು ಛಾಯಾಚಿತ್ರದಲ್ಲಿಯೂ ಪರಿಣಿತರು.



ಅವರಿಗೆ ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ದೆಹಲಿ ಕರ್ನಾಟಕ ಸಂಘದಿಂದ ವಿಶಿಷ್ಟ ಕನ್ನಡಿಗ ಪ್ರಶಸ್ತಿ, ಝಾನ್ಸಿ ರಾಣಿ ಪ್ರಶಸ್ತಿ, ಯು. ಎಸ್.ಎ. ಕಮಿಟಿ ಪ್ರಶಸ್ತಿ, ಮಾನವ ಸೇವಾ ಪದಕ, ಆದಿಶಂಕರಾಚಾರ್ಯ ಪ್ರಶಸ್ತಿ, ಭೀಮ ಕಲಾ ಬಿರುದು, ಕರ್ನಾಟಕದ ಅನೇಕ ಸಂಘ ಸಂಸ್ಥೆಗಳಿಂದ ಪುರಸ್ಕಾರ, ಪ್ರಶಸ್ತಿ, ಸನ್ಮಾನಗಳು ದೊರೆಕಿವೆ.

ಅವರು ತಮ್ಮ ಹುಟ್ಟುಹಬ್ಬ, ವಿವಾಹದ ವಾರ್ಷಿಕೋತ್ಸವಗಳನ್ನು ಕುಷ್ಟರೋಗಿಗಳ ಸೇವೆಯನ್ನು ಮಾಡುವ ಮೂಲಕ ಆಚರಿಸಿಕೊಳ್ಳುತ್ತಿದ್ದರು. ತಮ್ಮ ಮಕ್ಕಳ ಹುಟ್ಟುಹಬ್ಬ ಕುಷ್ಟರೋಗಿಗಳ ಕಾಲೋನಿಯಲ್ಲಿ ಮಾಡಿ ಮಾನವೀಯ ಸೌಹಾರ್ದತೆಯನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದರು. 1970ರಿಂದಲೇ ಮುರಗೋಡ ಅವರು ರಾಜಧಾನಿ ದೆಹಲಿಯಲ್ಲಿಯ ಕನ್ನಡ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡು ಮೆಚ್ಚುವಂಥ ಕಾರ್ಯ ಮಾಡುತ್ತಾ ಬಂದಿದ್ದಾರೆ. ಅಂದಿನಿಂದಲೇ ಅವರು ದೆಹಲಿಯಲ್ಲೆ 'ಗುರುಕಲಾ ಕುಟೀರ' ಎಂಬ ಕರ್ನಾಟಕ ಕಲಾವಿದರ ಸಂಸ್ಥೆ ಕಟ್ಟಿ ಅದರ ಅಧ್ಯಕ್ಷರಾಗಿ ಅದನ್ನು ಬೆಳೆಸಿದ್ದಾರೆ.

**ಡಾ. ಸಿ.ಕೆ. ನಾವಲಗಿ**

# ಇನ್ನಿಲ್ಲವಾದ ಮುರಗೋಡ ಮಿಡಿದ ಕಂಬನಿಗಳು

## ಅಗಲಿದ ಶ್ರೀ ಭೀಮರಾವ ಮುರಗೋಡ

ದೆಹಲಿ ಕನ್ನಡಿಗ, ಕಲಾವಿದ, ನಾಟಕ ಹಾಗೂ ಸಿನಿಮಾ ನಟ, ಹಾಗೂ ಅತೀ ದೊಡ್ಡ ಸಮಾಜ ಸೇವಕ ಶ್ರೀ ಭೀಮರಾವ ಮುರಗೋಡ ಅವರು ಅಕ್ಟೋಬರ್ ಐದನೆಯ ತಾರೀಖಿಗೆ ಬೆಂಗಳೂರಿನಲ್ಲಿ ನಿಧನರಾದರೆಂದು ಕೇಳಿ ವ್ಯಥೆಯಾಯಿತು. ಅವರನ್ನು ಬಲ್ಲ ಹಳೆಯ ಕನ್ನಡಿಗ ಸ್ನೇಹಿತರಲ್ಲಿ ನಾನೂ ಒಬ್ಬ. ನಾನು ದೆಹಲಿಗೆ ಬರುವುದಕ್ಕೆ ಎರಡು ವರ್ಷ ಮುಂಚಿತವಾಗಿ (1970) ಮುರಗೋಡರವರು ತಮ್ಮ ಅಣ್ಣ ಈಶ್ವರಪ್ಪನವರು ಹೊಸದೆಹಲಿಯ ಕೇಂದ್ರ ಸರಕಾರದ ಕಾರ್ಯಾಲಯದಲ್ಲಿ ತಮ್ಮನನ್ನೂ ಒಬ್ಬ ಕಲಾಕಾರನನ್ನಾಗಿ ನೇಮಿಸಿಕೊಂಡು ಕರೆಯಿಸಿಕೊಂಡರು. ಇಲ್ಲಿಗೆ ಬಂದನಂತರ ದೆಹಲಿಯಲ್ಲಿ ಅಂತರರಾಷ್ಟ್ರೀಯ ಕಲಾವಿದರನ್ನು ಹಾಗೂ ಮೇಧಾವಿಗಳನ್ನು ಕಂಡು ಪ್ರಭಾವಿತರಾಗಿ ಭೀಮರಾಯರು ಕೇಂದ್ರೀಯ ಆಧುನಿಕ ಸಂಗ್ರಹಾಲಯ, ಕಲಾಕೃತಿಗಳನ್ನು ವೀಕ್ಷಿಸಿ, ಹಗಲೂ-ರಾತ್ರಿ ಅವುಗಳನ್ನು ಅಭ್ಯಸಿಸಿ ಚಿತ್ರಕಲೆಯಲ್ಲಿ ನಿಪುಣತೆಯನ್ನು ಪಡೆದರು. ಇವರ ಕಲೆಯನ್ನು ಆರಂಭದಲ್ಲಿ ಗುರುತಿಸಿದ್ದು ದೆಹಲಿಯ "ಕನ್ನಡ ಭಾರತಿ" ಸಂಸ್ಥೆ. ಬಿ.ವಿ. ಕಾರಂತ, ಎಮ್.ಎಸ್. ಸತ್ಯು, ಪ್ರೇಮಾ ಕಾರಂತ ಹಾಗೂ ಪ್ರಭಾಕರ ರಾವ್ ನಿರ್ದೇಶಿಸಿದ ಅನೇಕ ಕನ್ನಡ-ಹಿಂದಿ ನಾಟಕಗಳಲ್ಲಿ ಇವರು ಭಾಗವಹಿಸಿದ್ದರಿಂದ ಮುರಗೋಡರವರ ಮಿತ್ರವೃಂದ, ಬಂಧುತ್ವ ಬೆಳೆಯಿತು. ಆಗ ದಿನಕ್ಕೆ ಹದಿನೆಂಟು ತಾಸುಗಳ ಕಾಲ ಸಂಘ-ಸಂಸ್ಥೆಗಳು, ಕೈಯಲ್ಲಿ ಬ್ರಶ್ ಬದಲು ಪೆನ್ನು ಹಿಡಿದಾದರೂ ಕಲೆ, ಸಾಹಿತ್ಯ, ರಂಗಭೂಮಿ, ಫೋಟೋಗ್ರಫಿ ಹಾಗೂ ಅತೀ ಮುಖ್ಯವಾದ ಸಮಾಜಸೇವೆ ಇವುಗಳಲ್ಲಿ ಕಾಲ ಕಳೆಯುತ್ತಿದ್ದರು. ಯಾವಾಗಲೂ ನಾನು ನನ್ನ ನಾಡಿಗೆ, ಸಮಾಜಕ್ಕೆ ನನ್ನ ದೇಶಕ್ಕೆ, ಮಾನವ ಕುಲಕ್ಕೆ ಏನು ಕೊಡುತ್ತಿದ್ದೇನೆ? ಎಂಬ ಕಳಕಳಿಯ ಚಿಂತನೆಯಲ್ಲಿಯೇ ಜೀವನವನ್ನು ಮುಗಿಸಿ ನಮ್ಮೆಲ್ಲರನ್ನು ಬಿಟ್ಟು ಅಗಲಿದ್ದಾರೆ.

ಶ್ರೀ ಭೀಮರಾವ್ ಫಕೀರಪ್ಪ ಮುರಗೋಡ ಅವರನ್ನು ನಾನು ಪ್ರಥಮವಾಗಿ ಭೇಟಿಯಾದದ್ದು ಸರೋಜಿನಿನಗರದಲ್ಲಿ ವಾಸವಾಗಿದ್ದ ದಿ. ಬಿ.ಆರ್. ಸಿದ್ಧಾಂತಿಯವರ ಮನೆಯಲ್ಲಿ. 1973ರ ದೀಪಾವಳಿಯಲ್ಲಿ ಅನೇಕ ಮಿತ್ರರನ್ನು ಕರೆದಿದ್ದ ಸಿದ್ಧಾಂತಿಯವರು ಕೇಂದ್ರ ಸರಕಾರದ ರೇಲ್ವೇ ಮಿನಿಸ್ಟ್ರಿಯಲ್ಲಿ ಒಬ್ಬ ನುರಿತ ಪ್ರಭಾವೀ ಸೆಕ್ಷನ್ ಆಫೀಸರಾಗಿದ್ದರು. ಅಣ್ಣ ಈಶ್ವರಪ್ಪನವರೊಂದಿಗೆ ಭೀಮರಾಯರೂ ಬಂದಿದ್ದರು. ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯವರಾದ್ದರಿಂದ ಧಾರವಾಡ ಜಿಲ್ಲೆಯವನಾದ ನನಗೂ ಅವರೊಂದಿಗೆ ನಮ್ಮ ಆಡುಭಾಷೆಯಲ್ಲಿ ಹರಟೆ ಹೊಡೆಯುತ್ತ ದೀಪಾವಳಿ ಹಬ್ಬವನ್ನು ಆಚರಿಸಿದ್ದೆವು. ಇಡೀ ರಾತ್ರಿಯೆಲ್ಲಾ ಪಗಡೆಯಾಟ ಹಾಡುವುದು, ಮಕ್ಕಳ ನೃತ್ಯ ಇತ್ಯಾದಿ ಆ ದಿನವನ್ನು ಕಳೆದದ್ದು ಇನ್ನೂ ಮರೆತಿಲ್ಲ. ಅದೇ ದಿನಗಳಲ್ಲಿ ನನಗೂ ಸರೋಜಿನಿ ನಗರದ ಎಂ-ಬ್ಲಾಕ್‌ನಲ್ಲಿ ಮನೆ ದೊರಕಿದ್ದರಿಂದಲೂ ಹಾಗೂ ನನ್ನ ಭಾವಮೈದುನ ಡಾ. ಮುರಲೀಧರ ಮುಧೋಳಕರವರು ದೆಹಲಿ ಕನ್ನಡ ಶಾಲೆಯಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ಬಂದು, ನಮ್ಮ ಮನೆಯಲ್ಲಿಯೇ ವಾಸಿಸುತ್ತಿದ್ದರಿಂದ "ಕನ್ನಡ ಭಾರತಿ" ಸಂಸ್ಥೆಯ ಕಲಾವಿದ ಸದಸ್ಯರೆಲ್ಲರ ಪರಿಚಯ, ಬಂಧುತ್ವ ಹೆಚ್ಚಾಗುತ್ತ ನಡೆಯಿತು. 1978ರಲ್ಲಿ ದೆಹಲಿಯಲ್ಲಿ ಅದ್ದೂರಿಯಾಗಿ 50ನೇಯ ಕನ್ನಡ ಸಾಹಿತ್ಯ ಸಮ್ಮೇಲನ ನಡೆದು, ಕಾರ್ಯದರ್ಶಿಗಳಾಗಿದ್ದ ದಿ. ಎಚ್.ಎಸ್. ಕುಲಕರ್ಣಿಯವರೊಂದಿಗೆ ನನಗೂ ಕೆಲಸ ಮಾಡಬೇಕಾದ ಪ್ರಮೇಯ ಬಂದದ್ದರಿಂದ ಶಾಲೆಯ, ಆಕಾಶವಾಣಿಯ, ದೆಹಲಿ ಕರ್ನಾಟಕ ಸಂಘದ ಎಷ್ಟೋ ಜನರು ಪರಿಚಿತರಾದರು. ಸೈನ್ಯದಲ್ಲಿದ್ದ ನನ್ನನ್ನು ದೆಹಲಿ ಕರ್ನಾಟಕ ಸಂಘದ ಅಂದಿನ ಅಧ್ಯಕ್ಷೆ ಶ್ರೀಮತಿ ಡಾ. ಸರೋಜಿನಿ ಮಹಿಷಿಯವರು ಗುರುತಿಸಿಕೊಂಡರು!

1974ರಲ್ಲಿ ಇವರಿಗೆ ವಿವಾಹವಾಯಿತು. ಶ್ರೀಮತಿ ಶಾಲನ್ ಅವರು ಆದರ್ಶ ಧರ್ಮಪತ್ನಿಯಾಗಿ ಭೀಮರಾಯರ ಜೀವನದಲ್ಲಿ ಬಂದು ಇವರ ಕಾರ್ಯಕ್ಕೆ ಸ್ಫೂರ್ತಿಯ ನೆಲೆಯಾದರು. ಒಂಟೆತ್ತಿನ ಬಂಡಿಯಾಗಿದ್ದ ಜೀವನ ಜೋಡೆತ್ತಿನ ಬಂಡಿಯಾಗಿ ಓಡತೊಡಗಿತು. ಇದೇ ಸಮಯದಲ್ಲಿ ದೆಹಲಿಯಲ್ಲಿ 'ಗುರುಕಲಾ ಕುಟೀರ' ಎಂಬ ಕರ್ನಾಟಕ ಕಲಾವಿದರ ಸಂಸ್ಥೆ ಕಟ್ಟಿ ಅಧ್ಯಕ್ಷರಾಗಿ ಬೆಳೆಸಿಕೊಂಡು ಬಂದರು. ರಾಷ್ಟ್ರೀಯ ಪರಿಹಾರ ನಿಧಿಗಾಗಿ ಅಕ್ಟೋಬರ್ 1975ರಲ್ಲಿ ಐಫಾಕ್ಸ್‌ನಲ್ಲಿ ಬೃಹತ್ ಚಿತ್ರಕಲಾ ಪ್ರದರ್ಶನ ನಡೆದಿತ್ತು. ದೇಶದ ಮಹಾನ್ ಕಲಾವಿದರಾದ ಬಿಮಲ್‌ದಾಸ್ ಗುಪ್ತ, ಜೆ. ಸ್ವಾಮಿನಾಥನ್, ಜೋಗೆನ್ ಚೌಧರಿ, ಲಕ್ಷ್ಮಣ ಪೈ, ಖೇಮರಾಜ್ ಹಾಗೂ ಧನ್‌ರಾಜ್ ಭಗತ್ ಇವರೆಲ್ಲರ ಚಿತ್ರಗಳ ಜೊತೆಗೆ ಭೀಮರಾವ್ ಮುರಗೋಡರವರ ಕಲಾಕೃತಿಗಳು ಪ್ರದರ್ಶನವಾದವು. ಅದರಲ್ಲಿ ಮಾರಾಟವಾದ ಇವರ ಕಲಾಕೃತಿಗಳ ಹಣವನ್ನೆಲ್ಲ ಪ್ರಧಾನಮಂತ್ರಿಗಳವರ ಸಹಾಯಾರ್ಥ ನಿಧಿಗೆ ಸೇರಿಸಲಾಯಿತು. ದೆಹಲಿಯ ಮಾಲವೀಯ ನಗರದ ಸನಾತನ ಮಂದಿರದಲ್ಲಿ ಶ್ರೀ ಮದನಮೋಹನ ಮಾಲವೀಯ ಹಾಗೂ ಅಖಿಲ ಭಾರತ ಸಾಧು ಸಮಾಜದ ಅಧ್ಯಕ್ಷ ಶ್ರೀ ಗುರುಚರಣ ಮಹಾರಾಜ ಅವರ ತೈಲವರ್ಣ ಭಾವಚಿತ್ರಗಳ ಅನಾವರಣವಾದವು. ಆ ಸಮಯದಲ್ಲಿ ಗುರುಚರಣ ಮಹಾರಾಜರು ಶ್ರೀ ಮುರಗೋಡರಿಗೆ 'ಕಲಾ ನಿಪುಣ' ಪದವಿಯನ್ನು ನೀಡಿ ಪುರಸ್ಕರಿಸಿದರು. ಅಮೇರಿಕಾ ರಾಷ್ಟ್ರಪತಿ ಜಿಮ್ಮಿ ಕಾರ್ಟರ್, ಫ್ರಾನ್ಸ್ ದೇಶದ ರಾಷ್ಟ್ರಪತಿ ಜಿಸ್ಕಾರ್ಡ ಅವರ ತೈಲಚಿತ್ರಗಳನ್ನು ಬರೆದು ಅವರುಗಳಿಂದ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ. ಸಾಹಿತ್ಯ ಸಮ್ಮೇಳನದ ಸುವರ್ಣ ಸಂಚಿಕೆಯ ಮುಖಪುಟ ವಿನ್ಯಾಸಕ್ಕೆ ಅನೇಕರಿಂದ ಹೊಗಳಿಕೆಗೆ ಪಾತ್ರವಾಗಿದೆ. ಇವರು ರಚಿಸಿದ ದೆಹಲಿ ಕರ್ನಾಟಕ ಸಂಘದ ಲಾಂಛನ ಎಲ್ಲರಿಂದಲೂ ಪ್ರಶಂಶಿಸಲ್ಪಟ್ಟು ಇಂದಿಗೂ ಸಂಘದ ಮುಖಪತ್ರಿಕೆ 'ಅಭಿಮತ'ದ ಮೇಲೆ ವಿರಾಜಿಸುತ್ತಿದೆ.

ಈ ರೀತಿ ಮುರಗೋಡರವರ ಜೀವನ ಏರಿಕೆಯಲ್ಲಿದ್ದಾಗ, 1989ರಲ್ಲಿ ಹಿರಿಯ ಅಣ್ಣ ಆಕಸ್ಮಿಕ ನಿಧನದ ನಂತರ ವಾಪಸು ಬೆಂಗಳೂರಿನಿಂದ ದೆಹಲಿಗೆ ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಬರುತ್ತಿದ್ದ ಸಮಯದಲ್ಲಿ ರೈಲು ದುರಂತದಲ್ಲಿ ಅಣ್ಣ ಈಶ್ವರಪ್ಪ ಮತ್ತು ಅತ್ತಿಗೆಯನ್ನು ಕಳೆದುಕೊಂಡರು. ಅಂದಿನಿಂದ ಇವರ ಹಾಗೂ ಶಾಲನ್‌ರವರ ಜವಾಬ್ದಾರಿ ಹೆಚ್ಚಾಗಿ ಈಶ್ವರಪ್ಪನವರ ಮಕ್ಕಳನ್ನೂ ತಮ್ಮ ಮಕ್ಕಳಂತೆಯೇ ಸಾಕಿ, ಸಲುಹಿ ಬೆಳೆಸಿ ಎಲ್ಲರನ್ನೂ ಸುಸಂಸ್ಕೃತ ನಾಗರಿಕರನ್ನಾಗಿ ಮಾಡಿದ ಶ್ರೇಯಸ್ಸು ಭೀಮರಾವ ಮುರಗೋಡರವರಿಗೇ ಸಲ್ಲಬೇಕು. ಸಮಾಜ ಸುಧಾರಕರಾಗಿದ್ದ ಇವರ ತಂದೆ ಫಕೀರಪ್ಪ ಮುರಗೋಡರವರು ಹುಟ್ಟು ಹಾಕಿದ್ದ 'ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ' ಹೊಸದೆಹಲಿಯ ಸಂಸ್ಥೆಗೆ ಅಧ್ಯಕ್ಷರಾಗಿದ್ದ ಈಶ್ವರಪ್ಪನವರು ನಿಧನರಾದ ನಂತರ ಅದನ್ನೂ ಪೋಷಿಸಿಕೊಂಡು ಭೀಮರಾವ್



ಮುರಗೋಡರವರೇ ಮುಂದುವರೆಸಿದರು. ಸಮಾಜದಲ್ಲಿ ಹರಡಿದ ದೇವದಾಸಿ ಪದ್ಧತಿ, ವರದಕ್ಷಿಣೆ ಪದ್ಧತಿಗಳಂತಹ ಅನೇಕ ಪದ್ಧತಿಗಳನ್ನು ತೊಡೆದು ಹಾಕುವುದು, ಪರಿವಾರ ನಿಯೋಜನೆ, ನಿರಕ್ಷರತೆಯ ವಿರೋಧವಾಗಿ ಎಲ್ಲರೂ ಶಿಕ್ಷಿತರಾಗಿರಿ, ಸಮೂಹಿಕ ವಿವಾಹಗಳನ್ನು ನೆರವೇರಿಸಿ ವಿವಾಹಗಳಲ್ಲಿಯ ದುಂದುವೆಚ್ಚವನ್ನು ವಿರೋಧಿಸಿರಿ, ಎಂಬೆಲ್ಲಾ ಸದ್ವಿಚಾರಗಳೇ ಈ ಸಂಸ್ಥೆಯ ಉದ್ದೇಶವಾಗಿದೆ. ಈ ಸಾಧನೆಯನ್ನು ತೋರಿಸುವುದಕ್ಕೆ ಶ್ರೀ ಮುರಗೋಡರು ತಮ್ಮ ಇಬ್ಬರು ಹೆಣ್ಣು ಮಕ್ಕಳ ವಿವಾಹವನ್ನೂ ಕೂಡ ಸಾಮೂಹಿಕವಾಗಿ ಆಚರಿಸಿದ್ದಾರೆ.

ಭೀಮರಾವ ಮುರಗೋಡರವರು ಗೌತಮ ಬುದ್ಧ, ಜಗಜ್ಯೋತಿ ಬಸವೇಶ್ವರ ಹಾಗೂ ಡಾ. ಬಿ.ಆರ್. ಅಂಬೇಡ್ಕರರ ವಿಚಾರಗಳನ್ನು ಸದಾ ಮನ್ನಿಸುವ ವಿಚಾರವಂತರಾಗಿದ್ದರು. ತಮ್ಮ ಹುಟ್ಟು ಹಬ್ಬದ ದಿನ ಮುರಗೋಡ ದಂಪತಿಗಳು ರಾಮಕೃಷ್ಣ ಪುರಂನಲ್ಲಿರುವ ಕುಷ್ಠರೋಗಿಗಳ ಕಾಲೋನಿಗೆ ಹೋಗಿ ಸ್ವತಃ ತಮ್ಮ ಕೈಯಾರೆ ಅವರಿಗೆ ಊಟ-ಉಪಚಾರ ಮಾಡಿಸುತ್ತಿದ್ದರು. ಅವರಿಗೆಲ್ಲ ಹೊಸಬಟ್ಟೆಗಳನ್ನು ಕೊಟ್ಟು ಬರುತ್ತಿದ್ದರು. ಜನಸೇವೆಯೇ ಜನಾರ್ದನನ ಸೇವೆಯೆಂದು ತಾವು ಎಲ್ಲಿಯೇ ಇರಲಿ, ಜನರನ್ನು ಆದರಿಸುತ್ತಿದ್ದರು. 1983ರಲ್ಲಿ ಫ್ರಾನ್ಸ್ ದೇಶಕ್ಕೆ ತೆರಳಿದ್ದ ಮುರಗೋಡರು ಪ್ಯಾರೀಸ್‌ನ ಮೆಮೂರ್ತನಲ್ಲಿ ಜಗತ್ತಿನ ಮೂಲೆಮೂಲೆಗಳಿಂದ ಬಂದಿದ್ದ ಕಲಾವಿದರ ವಿಶಿಷ್ಟ-ವಿಭಿನ್ನ ಶೈಲಿಗಳನ್ನು ಅಳವಡಿಸಿಕೊಂಡು ತಮ್ಮ ಜೀವನದಲ್ಲಿ ಎಲ್ಲಾ ಸರ್ವಧರ್ಮ ಸಂಸ್ಥೆಗಳಿಗೆ ಭೇಟಿ ನೀಡಿದ್ದರು. ಮೆಮೂರ್ತದಲ್ಲಿ ವಿವಿಧ ದೇಶಗಳ ಸಾವಿರಾರು ಜನ ಕಲಾವಿದರು ಸೇರುವಷ್ಟು ಇನ್ನೆಲ್ಲಿಯೂ ಸೇರುವುದಿಲ್ಲವೆಂದು ಹೇಳುತ್ತಿದ್ದರು. ಇವರು ರಚಿಸಿದ ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲ, ಸಭಾ ಅಧ್ಯಕ್ಷರ, ರಾಜಮಹಾರಾಜರ, ನ್ಯಾಯಾಧೀಶರ ತೈಲವರ್ಣ ಭಾವಚಿತ್ರಗಳು ಇಂದು ರಾಷ್ಟ್ರಪತಿ ಭವನ, ಪಾರ್ಲಿಮೆಂಟ್, ವಿಧಾನಸೌಧ, ಅರಮನೆ, ಮಹಲುಗಳಲ್ಲಿ ವಿರಾಜಿಸುತ್ತ ಇವರ ಪ್ರತಿಭೆಗೆ ಸಾಕ್ಷಿಯಾಗಿ ನಿಂತಿವೆ.

ಇಂತಹ ಕಲಾವಿದ ಶ್ರೀ ಭೀಮರಾವ ಮುರಗೋಡರವರನ್ನು ಕಳೆದುಕೊಂಡು ನಾವೆಲ್ಲರೂ ದುಃಖಿತಪ್ರರಾಗಿದ್ದೇವೆ. ಕನ್ನಡನಾಡಿಗೆ ವಿಶೇಷವಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡಿಗರಿಗೆ ತುಂಬಲಾರದ ನಷ್ಟವಾಗಿದೆ. 'ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ ಹಾಗೂ ಅವರ ಕುಟುಂಬದ ಎಲ್ಲಾ ಸದಸ್ಯರಿಗೂ ಅಪಾರ ದುಃಖವನ್ನು ತಡೆಯಲು ಶಕ್ತಿಯನ್ನೀಯಲಿ' ಎಂದು ಪ್ರಾರ್ಥಿಸಿದ್ದೇನೆ. 'ಮುರಗೋಡರು ಮತ್ತೆ ಕನ್ನಡನಾಡಿನಲ್ಲಿ ಹುಟ್ಟಿ ಬರಲಿ' ಎಂದು ಆಶಿಸುವ

*ಸುಧಾಕರ ಕುರಂದವಾಡ*

## ಕಲೆ ಮತ್ತು ಬದುಕಿನಲ್ಲಿ ಸಮಭಾವ ತೋರಿದ ಮುರಗೋಡ

ಮೊನ್ನೆ ಅಕ್ಟೋಬರ್ ಐದರಂದು ಆನಂದ ಮುರಗೋಡ ಅವರ ಮೂಲಕ ಭೀಮರಾವ್ ಮುರಗೋಡ್ ಅವರು ಬೆಂಗಳೂರಿನ ಫೋರ್ಟಿಸ್ ದವಾಖಾನೆಯಲ್ಲಿ ತೀರಿಕೊಂಡರೆಂಬ ಸುದ್ದಿ ತಲುಪಿತು. ಅವರನ್ನು ನಾನು ಸಪ್ಟಂಬರ್ 18ರಂದು ಭೇಟಿಯಾದಾಗ ಅವರು ನನ್ನನ್ನು ಕಣ್ಣು ತೆರೆದು ನೋಡಿ ನಕ್ಕು ಕಣ್ಣು ಮುಚ್ಚಿದರು.

ಬಿ.ಡಿ.ಜತ್ತಿಯವರು ದೇಶದ ಉಪರಾಷ್ಟ್ರಪತಿ ಯಾಗಿದ್ದಾಗ ನಾನು ಅವರ ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. 1977ರಲ್ಲಿ ನನಗೆ ಕಿದ್ವಾಯಿ ನಗರದಲ್ಲಿ ಮನೆ ಅಲಾಟ್ ಆಗಿತ್ತು. ಆಗ ಮುರಗೋಡ್ ಅವರು ಎ-49 ಸೌತ್ ಎಕ್ಸ್‌ಟೆನ್ಷನ್‌ನಲ್ಲಿ ವಾಸವಾಗಿದ್ದರು. ಮಾರ್ಕೆಟ್‌ನಲ್ಲಿ ಭೇಟಿಯಾಗಿದ್ದರು. ನಾನು ಯಾವುದೋ ಕಾರ್ಯ ನಿಮಿತ್ತ ಮನೆಗೆ ಹೋಗಿದ್ದೆ.

ಭೀಮರಾವ ಮುರಗೋಡ ತಮ್ಮ ಕಲೆಯ ಮೂಲಕ ಅಪಾರ ಸೇವೆ ಸಲ್ಲಿಸಿ ಅಂತರ್‌ರಾಷ್ಟ್ರೀಯ ಮಟ್ಟಕ್ಕೆ ಹೆಸರುವಾಸಿಯಾಗಿದ್ದ ಒಬ್ಬ ಅಪರೂಪದ ಧೀಮಂತ ವ್ಯಕ್ತಿ. ಅಣ್ಣ ಬಸವಣ್ಣನವರ ಬಗ್ಗೆ ಇವರ ಪೂರ್ವಜರು ತಂದೆ ತಾಯಿ ಸಂಬಂಧಿಕರು ಲಿಂಗ, ವಿಭೂತಿ ಧರಿಸಿದಲ್ಲದೆ ಇವರ ತಂದೆ ಫಕೀರಪ್ಪ ಮಾಸ್ತರ್ ಸಮಗಾರ ಮನೆತನದಲ್ಲಿ ಹುಟ್ಟಿದ್ದರೂ ಸಹ ಶರಣರ ವಿಚಾರಕ್ಕೆ ತಮ್ಮ ತನು-ಮನ-ಧನ ಅರ್ಪಿಸಿದ ಕೀರ್ತಿ ಇವರದಾಗಿದೆ. ಪೂಜ್ಯ ಶ್ರೀ ಮಾತೆ ಮಹಾದೇವಿಯವರು ಹಾಗೂ ಲಿಂಗಾನಂದ ಸ್ವಾಮಿಗಳು ನಾನು 1971 ರಲ್ಲಿ ಧಾರವಾಡದಲ್ಲಿ ಶಿವಾನುಭವ ಶಿಬಿರಕ್ಕೆ ಹೋದಾಗ ಫಕೀರಪ್ಪ ಅವರ ಬಗ್ಗೆ ಸಂಭಾಷಣೆ ನಡೆಯಿತು. ಸುಮಾರು ಆರು ವರುಷದ ನಂತರ ದೆಹಲಿಗೆ ಬಂದಾಗ ಅವರ ಮಕ್ಕಳೇ ಈಶ್ವರಪ್ಪ, ಶಾಂತಪ್ಪ, ಭೀಮರಾವ ಮುರಗೋಡರ ಭೇಟಿಯಾಗಿದ್ದು ನನ್ನ ಭಾಗ್ಯ ಎಂದು ತಿಳಿದುಕೊಂಡೆ. ಇವರ ತಂದೆಯವರು ಮೂರು ಹಳ್ಳಿಗಳ ಶಿವಾನುಭವ ಸಪ್ತಾಹ ಕಾರ್ಯಕ್ರಮ ಬೆಳಗಾವಿಯಲ್ಲಿ ಬಹು ಅದ್ದೂರಿಯಾಗಿ ನಡೆಸಿಕೊಂಡು ಬರುತ್ತಿದ್ದರು.

ಇದು ನಿಮ್ ಆಸ್ತಿ ಎಂದು ಹೇಳಿ ಹೋದ ಫಕೀರಪ್ಪನವರ ಆತ್ಮಶಾಂತಿಗಾಗಿ ತಪ್ಪದೆ ಕಾರ್ಯಕ್ರಮ ನಡೆಸಿಕೊಂಡು ಜನರ ಪ್ರೀತಿಗೆ ಪಾತ್ರರಾಗಿ ಸೇವೆ ಸಲ್ಲಿಸುತ್ತಿರುವುದು ನಮ್ಮ ನಾಡಿನ ಭಾಗ್ಯವೆಂದು ಹೇಳಬಹುದು. ಸಾಮಾಜಿಕ ಸುಧಾರಣ ಆಂದೋಲನದ ಮುಖಾಂತರ 12ನೇ ಶತಮಾನದ ಶರಣ ಶ್ರೇಷ್ಠರಾದ ಸಮಗಾರ ಹರಳಯ್ಯ ಹಾಗೂ ಉತ್ತರ ಭಾರತದ ಶರಣ ರವಿದಾಸರ ತುಲನಾತ್ಮಕ ಕಾರ್ಯಕ್ರಮವನ್ನು 1981ರ ದಶಕದಲ್ಲಿ ಆರ್.ಕೆ.ಪುರಂನ ರವಿದಾಸ ಮಂದಿರದಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲಾಯಿತು.

ಶರಣರ ಭಾವಚಿತ್ರಗಳು ಸ್ವತಃ ರಚಿಸಿ ದೆಹಲಿಯ ಹೆದ್ದಾರಿಗಳಲ್ಲಿ ಭಜನೆ ಮೂಲಕ ಶರಣರನ್ನು ಪರಿಚಯಿಸಿದ ಕೀರ್ತಿ ಇವರದಾಗಿದೆ. ಇವರು ಕಲಾಮಟ್ಟದಲ್ಲಿ ಅನೇಕ ಸಭೆ



ಸಮ್ಮೇಳನಗಳಲ್ಲಿ ಭಾಗವಹಿಸಿ ರಾಷ್ಟ್ರದ ಹಾಗೂ ಅಂತರ್‌ರಾಷ್ಟ್ರದಮಟ್ಟದಲ್ಲಿ ಕ್ರಿಯಾಶೀಲರಾಗಿ ಅನೇಕ ಮುಖಂಡರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರು ಕೇವಲ ಸಮಾಜದ ಕುರಿತು ಚಿಂತಿಸದೆ ಸಂಪೂರ್ಣ ದೇಶದ ಬಗ್ಗೆ ಚಿಂತಿಸುವ ವ್ಯಕ್ತಿಯಾಗಿದ್ದರು. ಕಲಾವಿದ ತಾವು ಬೆಳೆಯುವುದಲ್ಲದೆ ಕಿರಿಯರನ್ನು ಸಹ ಬೆಳೆಸುವುದು ಅವರ ಕಲೆಯಾಗಿತ್ತು. ಬೆಳಗಾವಿಯ ಮೂರು ಹಳ್ಳಿಗಳಲ್ಲಿ ಶರಣ ಹರಳಯ್ಯ ಸಪ್ತಾಹ ಕಾರ್ಯಕ್ರಮ ಮೂರು ಮಕ್ಕಳಾದ ಸ್ವರೂಪ, ಆನಂದ ಮತ್ತು ಗೌತಮನಿಗೆ ಇದು ನಿಮ್ಮ ಆಸ್ತಿ ಎಂದು ನಿರಂತರವಾಗಿ ನಡೆಸಿಕೊಂಡು ಹೋಗಬೇಕೆಂದು ತಮ್ಮ ಕೊನೆಯ ಮಾತಿನಲ್ಲಿ ಕಿವಿಮಾತು ಹೇಳಿದ್ದಾರೆ.

ಕೇಂದ್ರ ಸರಕಾರದಲ್ಲಿ ಕಲಾವಿದನಾಗಿ ಕೆಲಸ ಮಾಡಿ ಕಲಾವಿದೆ ಶಾಲನ್ ಅವರ ಜೊತೆ ಲಗ್ನವಾಗಿ ನಂತರ ಇಬ್ಬರು ಸಾಮಾಜಿಕವಾಗಿ ದೆಹಲಿ ಕರ್ನಾಟಕ ಸಂಘ, ಕನ್ನಡ ಶಾಲೆ, ಬಸವ ಇಂಟರ್‌ನ್ಯಾಷನಲ್ ಸೆಂಟರ್, ಸಾಮಾಜಿಕ ಸುಧಾರಣೆ ಸಂಸ್ಥೆ ಜಾಟವ ಸಮಾಜ, ಬಸವ ಸಮಿತಿ ಹೀಗೆ ಅನೇಕ ಸಂಸ್ಥೆಗಳ ಜೊತೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದರ ಏಳಿಗೆಗೆ ಸಮಗ್ರ ಸೇವೆ ಸಲ್ಲಿಸಿದವರಾಗಿದ್ದಾರೆ.

ನಾನು ಇವರ ಸುಂದರ ಭಾವಚಿತ್ರದ ಕಲೆಯ ಬಗ್ಗೆ ಮಾನ್ಯ ಉಪರಾಷ್ಟ್ರಪತಿ ಬಿ.ಡಿ.ಜತ್ತಿಯವರನ್ನು ಪರಿಚಯಿಸಿದೆ. ಇವರು ಪೇಟಿಂಗ್ ಪಿಫಿಕೆಸ್ ಆರ್ಟಗ್ಯಾಲರಿಯು 1985 ರಲ್ಲಿ ಉದ್ಘಾಟನೆ ಸಮಾರಂಭದಿಂದ ಇಂದಿನವರೆಗೆ ಮುರಗೋಡರ ಜೊತೆಯಲ್ಲಿ ಸಂಬಂಧ ಗಾಢವಾಗಿ ಬೆಳೆಯಿತು. ಲೋಕಸಭೆ ಹಾಗೂ ರಾಜ್ಯಸಭೆಯ ಅಧಿಕಾರಿಗಳನ್ನು ಭೇಟಿ ಮಾಡಿಸುವ ಸೌಭಾಗ್ಯ ನನಗೆ ದೊರಕಿತು. ಇವರು ನನ್ನ ಆತ್ಮೀಯ ಮಿತ್ರ ಆದರೆ ಅವರೊಬ್ಬ ಅಂತರ್‌ರಾಷ್ಟ್ರೀಯ ಕಲಾವಿದನೆಂಬ ಹೆಮ್ಮೆ ನನಗಿದೆ. ಅವರು ಚಿತ್ರಿಸಿರುವ ಬಾಬಾಸಾಹೇಬ ಅಂಬೇಡ್ಕರ್, ಮಾಜಿ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿಗಳ, ಸೆಂಟ್ರಲ್ ಭವನದಲ್ಲಿ ಹುಟ್ಟುಹಬ್ಬ ಹಾಗೂ ಪುಣ್ಯತಿಥಿಯಲ್ಲಿ ಪೂಜೆ ನಡೆಯುತ್ತಿರುವುದು ನಮ್ಮೆಲ್ಲ ಕನ್ನಡರಿಗೆ ಸಂತೋಷದ ಹಬ್ಬವೆಂದು ಹೇಳಬಹುದು. ಇದಲ್ಲದೆ ರಾಷ್ಟ್ರದ ಸಂಸತಕ್ಕೆ ಪಾತ್ರರಾದ ಹಿರಿಯ ಸಾಮಾಜಿಕ ಕಾರ್ಯಕರ್ತೆ ಭಾರತರತ್ನ ಮದರ ತೆರೆಸಾ, ಸಂಗೀತದಲ್ಲಿ ಹೆಸರು ವಾಸಿಯಾಗಿರುವ ಲತಾ ಮಂಗೇಶ್ಕರ್, ಭೀಸಮಿಯ್ಯಖಾನ್ ಹೀಗೆ ಅನೇಕ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸೇವೆಯಲ್ಲಿ, ಧಾರ್ಮಿಕ ಸೇವೆಯಲ್ಲಿ ದುಡಿದ ಮಹನಿಯರನ್ನು ಚಿತ್ರಿಸಿರುವ ಭಾವಚಿತ್ರಗಳು ಎಲ್ಲರಿಗೂ ಮನಮುಟ್ಟುವ ತೈಲಚಿತ್ರ ಸಾವಿರಾರು ವರುಷ ಬಾಳುವ ಕಲೆಯನ್ನು ಏರ್ಪಡಿಸಿ ಗುರುಕುಲ ಕುಟೀರ ಇಂದು ದೆಹಲಿ ಹಾಗೂ ಬೆಂಗಳೂರಿನಲ್ಲಿ ಸ್ಥಾಪಿಸಿದ ಕೀರ್ತಿ ಇವರದಾಗಿದೆ. ಅಲ್ಲದೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹೆಸರು ವಾಸಿಯಾದ ಮಾಜಿ ರಾಷ್ಟ್ರಪತಿಗಳಾಧ ಬಿಲ್ ಕ್ಲಿಂಟನ್, ಬರಾಕ್ ಓಬಾಮ, ಪುಟಿನ್ ದೆಹಲಿಗೆ ಬಂದಾಗ ಹೋಟಲನಲ್ಲಿ ಭೇಟಿ ಮಾಡುವ ಪ್ರಸಂಗ ಅವರ ಸಹಿ ಹಾಕುವ ಪ್ರಸಂಗ ನೋಡಿದರೆ ಎದೆ ಜುಮ್ಮ ಅನ್ನುತಿತ್ತು. ನಾನು ಇವರ ಜೊತೆಯಲ್ಲಿ ಸಹಪಾಠಿಯಾಗಿ ಇದ್ದಷ್ಟು ಯಾರ ಜೊತೆಯಲ್ಲಿ ಇರಲಿಲ್ಲ. ಮನೆ ಎರಡಾದರು ಮನ ಒಂದಾಗಿತ್ತು. ಯಾವ ಕಾರ್ಯಕ್ರಮ ಬಿಟ್ಟು ಮಾಡುತ್ತಿರಲಿಲ್ಲ. ಸಿನಿಮಾ ರಂಗದಲ್ಲಿ ಕೆಲಸ ಮಾಡುವ ಮಹಾನ ಕಲಾಕಾರರಾದ ಹೇಮಾಮಾಲಿನಿ, ಧರ್ಮೇಂದ್ರ, ಸಿರಿಫೋರ್ಟದಲ್ಲಿ ಹಾಗೂ ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರ ಮನೆಯಲ್ಲಿ 28-03-2012 ಸಹಿ ಮಾಡಿಸುವಲ್ಲಿ ನನ್ನನ್ನು ಸಹ ಕರೆದುಕೊಂಡು ಹೋಗಿದ್ದರು. ಎಲ್ಲಾ ಕ್ಷೇತ್ರಗಳಲ್ಲಿ ನನ್ನ ಸ್ನೇಹಜೀವಿಯಾಗಿ ಈ ಸ್ನೇಹ ಭ್ರಾತೃತ್ವಕ್ಕೆ ಧಕ್ಕೆ ಬಾರದ ಹಾಗೆ ನಡೆದುಕೊಂಡ ಕೀರ್ತಿ ಮುರಗೋಡರವರಾಗಿದ್ದಾರೆ. ಇವರೊಬ್ಬ ನನಗೆ ನನ್ನ ಮನೆಯ ದಾರಿದೀಪವಾಗಿದ್ದಾರೆ. ಅವರ ಕ್ಷಣ ಕ್ಷಣದ ಕೊನೆಯ ಮಾತುಗಳು ನನ್ನ ಲೇಖನದಿಂದ ಅಳಿಯಲು ಸಾಧ್ಯವಿಲ್ಲ. ಮುರಗೋಡ ಅವರ ಮನೆ ಮನ ನನ್ನ ಮನೆಯ ಕೊಂಡಿಯಾಗಿತ್ತು. ಕೇಂದ್ರ ಸರಕಾರದಲ್ಲಿ ಕಲಾವಿದನಾಗಿ ಕೆಲಸ ಮಾಡಿಕೊಂಡು ತಮ್ಮ ಕಲೆಯಲ್ಲಿ ಚಿತ್ರಕೃತಿಗಳ ಭಾವನಾ ಪ್ರಾಧನ್ಯತೆಗೆ ನೈಜಕತೆಯನ್ನು ತುಂಬಿದೆ. ಒಂದೇ ಮುಖದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಅವರ ಶಾಂತಿ, ದಯೆ, ಕರುಣೆಯ ಪ್ರತಿಯಾಗಿ ಬಿಂಬಿಸಿದ ಭಾವಚಿತ್ರ ಎಲ್ಲಾ ಮಾನವ ಜೀವಿಗೆ ಮನಮುಟ್ಟುವ ಹಾಗೆ ಬಿಂಬಿಸಿದ್ದಾರೆ. ಮಾನವ ಕುಲವನ್ನು ಒಂದಾಗಿ ಮಾಡಿಸುವ ಘನ ಪ್ರಯತ್ನ ಅವರದಾಗಿತ್ತು. ಚಿತ್ರ ಕಲೆಯೇ ಇವರ ಬದುಕು ಆಗಿತ್ತು. ಯಾವಾಗಲೂ ಸಮಯದ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ಸುಮ್ಮನೆ ಕಾಲ ಕಳೆಯುವುದು, ಹರಟೆ ಹೊಡೆಯದೆ ಸದಾ ಬದುಕೆ ಚಿತ್ರಕಲೆಯಾಗಿ ಮಾರ್ಪಡಿಸಿಕೊಂಡಿದ್ದರು. ಫಕೀರಪ್ಪನ ಮಕ್ಕಳಾದ ಶಾಂತವೀರಪ್ಪ, ಈಶ್ವರಪ್ಪ, ಭೀಮಪ್ಪ ತನ್ನ ತಂದೆಯ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ದೇಶ ವಿದೇಶಗಳಲ್ಲಿ ಸಂಚರಿಸಿ ತಮ್ಮ ತೈಲವರ್ಣ ಭಾವಚಿತ್ರ ಕಲೆಯ ಮುಖಾಂತರ ತೈಲಚಿತ್ರಣ ಬಿಡಿಸಿ ಭಾರತದ ಕಲಾವಿದನ ಪರವಾಗಿ ಕೊಡುಗೆಯಾಗಿ ನೀಡಿ ವೈಟ್‌ಹೌಸ ಹಾಗೂ ಅನೇಕ ದೇಶ ವಿದೇಶಗಳಿಂದ ಮೆಚ್ಚುಗೆ ಪತ್ರ ಪಡೆದ ಶ್ರೇಯಸ್ಸು ಇವರದಾಗಿದೆ.

ಶ್ರೀ ಮುರಗೋಡರವರು ಬರಿ ಕಲಾಕಾರರಾಗದೆ ಅವರು ಲೇಖಕರು ಅನುವಾದಕರು, ಸಂಗೀತಗಾರರು, ನಾಟಕಗಾರರು, ಸಿನಿಮಾ ರಂಗದಲ್ಲಿ ಆದಿ ಶಂಕರಾಚಾರ್ಯರಾಗಿ ಹೀಗೆ ಅನೇಕ ವಿವಿಧ ರಂಗಗಳಲ್ಲಿ ಪಾತ್ರವಹಿಸಿ ಸಮಾಜದಲ್ಲಿನ ಅಜ್ಞಾನ ಅಂಧಕಾರ, ಮೇಲು ಕೀಳುಗಳೆಂಬ ಭಾವನೆಯನ್ನು ಹೋಗಲಾಡಿಸಿ ಪ್ರೀತಿ, ಪ್ರೇಮ, ಶಾಂತಿ ಸದ್ಭಾವನೆ ಮೂಡಿಸುವ ರಾಷ್ಟ್ರೀಯ ಐಕ್ಯತೆಗೆ ಶಕ್ತಿ ನೀಡುವ ಕೆಲಸ ಮಾಡಿದ್ದಾರೆ. ಎಂ.ಎಸ್.ಸತ್ಯು ಅವರು ಬರೆದ ಮೋಟಿರಾಮನ ಸತ್ಯಾಗ್ರಹ, ಟಿಪ್ಪು ಸುಲ್ತಾನ, ನಾಟಕದಲ್ಲಿ ದೆಹಲಿಯ ಮಾವಲಂಕಾರ್ ಹಾಲ್ ಹಾಗೂ ಕನ್ನಡ ಶಾಲೆಯಲ್ಲಿ ಇವರ ಜೊತೆಯಲ್ಲಿ ಪಾತ್ರವಹಿಸುವ ಸುಯೋಗ ಇವರಿಂದ ನನಗೆ ದೊರಕಿತ್ತು. ಇವರ ಮನೆ ಕಲಾವಿದರ ಮನೆ, ಇವರ ಮನೆಯ ಗುರುಕುಲ ಕುಟೀರ, ಸಾಮಾಜಿಕ ಪ್ರಗತಿಶೀಲ ಸಂಸ್ಥೆಯ ಅಧ್ಯಕ್ಷರಾದ ಇವರು ಪ್ರತಿ ವರುಷ ಸಮಾಜ ಸುಧಾಕರಕರ ದಿನ ಸೆಪ್ಟೆಂಬರ್ ತಿಂಗಳಲ್ಲಿ ಹಮ್ಮಿಕೊಂಡು ಪ್ರಶಸ್ತಿ ಮಾನವ ಸೇವಾ ಪದಕ ಎಂಬ ಬಿರುದು ನೀಡುತ್ತಿದ್ದರು. ವಯೋವೃದ್ಧ 109 ವರುಷ ಬಾಳಿ ಬದುಕಿದ್ದ ಶ್ರೀ ಮ.ಘ.ಡಾ.ಚನ್ನಬಸವ ಪಟ್ಟದ್ದೇವರನ್ನು ರಾಷ್ಟ್ರಮಟ್ಟದಲ್ಲಿ ಮಾಜಿ ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗರ ತಮ್ಮ ಲಂಡನ್ ಕಾರ್ಯಕ್ರಮ ತೆರವುಗೊಳಿಸಿ ಶ್ರೀಗಳಿಗೆ ಗೌರವ ಸಮರ್ಪಣೆ ಮಾಡುವ ಕೀರ್ತಿ ಇವರದಾಗಿದೆ. ಇವರ ಮುಖ್ಯಯ ಉದ್ದೇಶ ಸಮಾಜದ ಪ್ರತಿಯೊಬ್ಬ ಮಾನವ ಮಾನವನಾಗಿ ಬದುಕಬೇಕು. ಹಿಂದೂ, ಮುಸ್ಲಿಂ, ಶಿಖ್, ಇಸಾಯಿ ನಾವೆಲ್ಲರೂ ಅಣ್ಣ ತಮ್ಮಂದಿರು ಎಂಬ ಭಾವ ಬೆಳೆಯಬೇಕು

ಎಂಬ ಮನೋಭಾವ ಇವರದಾಗಿತ್ತು. ಇವರು ಅಂದಿನಿಂದ ತಮ್ಮ ಕೊನೆಯ ಉಸಿರು ಇರುವವರೆಗೆ ಎಲ್ಲಾ ಸಮಾಜದ ಮುಖಂಡರನ್ನು ಒಟ್ಟುಗೂಡಿಸಿ ನಾವೆಲ್ಲ ಭಾರತೀಯರು ಮತ್ತು ಜಾತಿ–ಭೇದವಿಲ್ಲದೆ ಲಿಂಗಭೇದವಿಲ್ಲದೆ ಕಾರ್ಯ ಮಾಡಿ ದೇಶವನ್ನು ಪ್ರಗತಿ ಪಥದಲ್ಲಿ ಸಾಗಬೇಕೆಂಬ ಸಭೆಯನ್ನು ಉದ್ದೇಶಿಸಿ ಶಪಥವನ್ನು ಮಾಡಿಸುತ್ತಿದ್ದರು. ಸಂಜೆ ಇಡೀ ರಾತ್ರಿ ಶರಣರ, ಸಂತ ಕಂಬೀರ, ಗುರುನಾನಕ, ದಾಸರ, ಭಜನೆ ಮುಖಾಂತರ ಎಲ್ಲರನ್ನು ಮುಗ್ದಗೊಳಿಸುತ್ತಿದ್ದರು. ಮುಂಜಾನೆ ಎಲ್ಲ ಸಮಾಜದ ಧಾರ್ಮಿಕರ ಭಾವಚಿತ್ರದ ಮೆರವಣಿಗೆಯಲ್ಲಿ ಕುಣಿದು ನಕ್ಕು ನಲಿದು ಶರಣರ ವಿಚಾರಧಾರೆಗಳು ದೆಹಲಿಯ ಮೂಲೆ ಮೂಲೆಗಳಲ್ಲಿ ಪರಿಚಯಿಸುವ ಕೆಲಸ ಇವರದಾಗಿದೆ. ವಿವಿಧ ಧರ್ಮದ ಮಹಿಳಾ ಮುಖಂಡರಿಂದ 21ನೇ ಸಮಾಜ ಸುಧಾಕರ ದಿನಾಚರಣೆ 2010ರ ಸಪ್ಟಂಬರ್ 25ರಂದು ಕರ್ನಾಟಕ ಸಂಘದ ಸಭಾಂಗಣದಲ್ಲಿ ಮುಖ್ಯ ಅತಿಥಿಯಾಗಿ ನಜ್ಮಾ ಹೆಫ್ತುಲ್ಲಾ ಮಾಜಿ ಉಪಸಭಾಪತಿ , ಭಿಕ್ಕುಣಿ ಪೂರ್ಣಿಮಾ, ಶ್ರೀಮತಿ ಶಾಲನ್ ಮುರಗೋಡ ಹಾಗೂ ರಾಷ್ಟ್ರದ ವಿವಿಧ ಪ್ರದೇಶಗಳಿಂದ ಬಂದ ಸಾಧಕಿಯರ ಸಂಖ್ಯೆ ಬಂದಿದ್ದು ನೋಡಿದರೆ 5 ದಶಕಗಳಿಂದ ದೆಹಲಿಯಲ್ಲಿದ್ದ ನಾನು ಎಂದು ನೋಡಲಿಲ್ಲ. ಇಂಥ ಅನೇಕ ಕಾರ್ಯಕ್ರಮಗಳು ದೆಹಲಿಯ ಲಾಲ್‌ಖಿಲಾ ಮೈದಾನದಲ್ಲಿ ಛತ್ತರ್‌ಪುರ ಮಂದಿರದ ಪೂಜ್ಯ ಶ್ರೀ ನಾಗಪಾಲ ಮಹಾರಾಜರ ಸಮ್ಮುಖದಲ್ಲಿ, ಮಾವಲಂಕರಹಾಲ, ಡೆಪ್ಯೂಟಿ ಸ್ಪೀಕರ್ ಹಾಲ, ವಿಠಲಬಾಯಿ ಪಟೇಲ ಹೌಸ, ರವಿದಾಸ ಮಂದಿರ ಆರ್. ಕೆ.ಪುರಂ. ಲೋದಿ ಕಾಲೋನಿ, ಹರಿಕೇಶ ನಗರ, ಕರ್ನಾಟಕ ಸಂಘ ಹಾಗೂ ಬಂಧು–ಮಿತ್ರರ ಮನೆಗಳಲ್ಲಿ ಸಹ ಕಾರ್ಯಕ್ರಮ ಹಮ್ಮಿಕೊಂಡು ನಮ್ಮ ದೇಶ ನಮ್ಮ ಜನ ದೇಶಕ್ಕಾಗಿ ನಾವು ದುಡಿಯಬೇಕು. ನಾವೆಲ್ಲ ಒಂದೇ ತಾಯಿಯ ಮಕ್ಕಳೆಂಬ ಭಾವನೆ ಮೂಡಿಸುತ್ತಿದ್ದರು. ಅಣ್ಣ ಈಶ್ವರಪ್ಪ ಮುರಗೋಡ ಈ ಸಂಸ್ಥೆಯ ಅಧ್ಯಕ್ಷರಾಗಿದ್ದರು. ನಾನು ಕಾರ್ಯದರ್ಶಿಯಾಗಿದ್ದೆ. ನಂತರ ಅವರ ಅಣ್ಣ ಶಾಂತವೀರಪ್ಪ 12–04–1989ರಲ್ಲಿ ತೀರಿಕೊಂಡ ನಿಮಿತ್ತ ಬೆಳಗಾವಿಗೆ ಹೋಗಿದ್ದರು. ಅದೇ ಸಮಯದಲ್ಲಿ ಅವರ ಚಿಕ್ಕಪ್ಪ ಕೂಡಾ ತೀರಕೊಂಡಿದ್ದರು. ಅದನ್ನು ಮುಗಿಸಿ ಕರ್ನಾಟಕ ಎಕ್ಸ್‌ಪ್ರೆಸ್‌ನಿಂದ ತಮ್ಮ ಪರಿವಾರದ ಜೊತೆಗೆ ಪ್ರಯಾಣಿಸುತ್ತಿದ್ದರು. ದಿ: 16–04–1989 ರಂದು ಝಾಂಸಿಯ ಲಲಿತಪುರಕ್ಕೆ ಬಂದಾಗ ರೈಲ್ವೆ ಅಪಘಾತದಲ್ಲಿ ಈಶ್ವರಪ್ಪ ಹಾಗೂ ಪತ್ನಿ ಕಸ್ತೂರಿ ಇಬ್ಬರು ತೀರಿಕೊಂಡರು. ಮಕ್ಕಳು ಜೀವ ಮರಣದ ಚಿಂತೆ ಬಂದು ಕಡೆ, ನೋಡುವವರು ಯಾರು ಇರಲಿಲ್ಲ. ನಾನು ನನ್ನ ಹೆಂಡತಿ ಶಾರದಾ ಜೊತೆಯಲ್ಲಿ ಹೋಗಿದ್ದೆ. ಆಮೇಲೆ ನನ್ನ ಮಿತ್ರ ಭೀಮರಾವ ಮುರಗೋಡ ಮತ್ತು ಅವರ ಕುಟುಂಬ ಜೊತೆಗೆ ಬಂದಿದ್ದರು. ಬೇಸಿಗೆ ಬಿಸಿಲು ಇಬ್ಬರೂ ಕೂಡಿ ಲಲಿತಪುರದ ಪಕ್ಕದ ಹೊಲದಲ್ಲಿ ಸಾವಿರಾರು ಜನರನ್ನು ಶವಗಳು ಹಾಕಿದ್ದು ನೋಡಿದೆವು. ಅದೊಂದು ಭಯಾನಕ ಪ್ರಸಂಗ ಅಲ್ಲಿಯ ಶವಸಂಸ್ಕಾರ ಮಾಡಿ ಮಕ್ಕಳನ್ನು ಕರೆದುಕೊಂಡು ದೆಹಲಿಯ ಆಸ್ಪತ್ರೆಯಲ್ಲಿ ಮಕ್ಕಳ ಅಸ್ಮುತೆ ಒಂದು ಕಡೆ ಒಂದೇ ವಾರದಲ್ಲಿ ಅಣ್ಣಂದಿರ ಸಂಬಂಧಿಕರ ದುರ್ಮರಣ ಒಂದು ಕಡೆ ಬಡತನ ಮತ್ತೊಂದು ಕಡೆ ಸಮಾಜದ ಚಿಂತನೆ, ನೀನೊಲಿದರೆ ಕೊರಡು ಕೊನರುವುದಯ್ಯ ಎಂಬ ಬಸವಣ್ಣನ ನುಡಿಯಂತೆ ಮಕ್ಕಳು ಚೇತರಿಸಿಕೊಂಡರು. ಎಲ್ಲಾ ಮಕ್ಕಳು ನನ್ನದೆಂದು ತಿಳಿದು ಕಾರ್ಯನಿರ್ವಹಿಸಹತ್ತಿದ್ದರು. ನಂತರ ಈ ಸಂಸ್ಥೆಯ ಅಧ್ಯಕ್ಷರಾಗಿ ಮುಂದುವರಿಸಿಕೊಂಡರು. ಅಂದಿನಿಂದ ಅವರು ಖಾದಿ, ಖಾಕಿ, ಕಾವಿಬಟ್ಟೆ ಸಾಂಕೇಂತಿಕವಾಗಿ ಉಟ್ಟು ಅದರ ತತ್ವಪರಿಕಲ್ಪನೆಯಿಂದ ಸಮಾಜದ ಜೊತೆಯಲ್ಲಿ ಒಂದುಗೂಡಿ ಸಮಾಜದ ಪರಿವರ್ತನೆ ಮಕ್ಕಳ ಭವಿಷ್ಯ ಮುಂದಿಟ್ಟು ಶ್ರಮಪಡಹತ್ತಿದ್ದರು. ದೇವರಿದ್ದಾನೆ, ನಾನು ಸಾಯುತ್ತೇನೆ, ಪರೋಪಕರ ಮಾನವ ಧರ್ಮ ಎಂಬ ಮೂರು ಮಂತ್ರಗಳನಿಟ್ಟುಕೊಂಡು ಅಣ್ಣ ಈಶ್ವರಪ್ಪನ ಪುಣ್ಯತಿಥಿಯನ್ನು ಸಮಾಜದ ಸುಧಾಕರರ ದಿನ ಎಂಬ ಶೀರ್ಷಿಕೆಯೊಂದಿಗೆ ಮಾನವ ಕಲ್ಯಾಣ ತಮ್ಮ ಕಲೆಯ ಮುಖಾಂತರ ತಮ್ಮ ಪ್ರತಿಭೆಯನ್ನು ಬಿಂಬಿಸಿ ನಾವೆಲ್ಲ ಒಂದೇ ಕುಟುಂಬಕ್ಕೆ ಸೇರಿದವರು ಎಂಬ ಭಾವನೆ ಅವರ ಅನೇಕ ಭಾವಚಿತ್ರಗಳಲ್ಲಿ ಮೂಡಿ ಬಂದಿದೆ. ಅವರ ಲಾಂಛನ ಒಂದು ತಲೆಬುರಡೆ ಅದು ಯಾವಾಗಲು ಕೊರಳಲ್ಲಿ ಇರುತಿತ್ತು. ಲಿಂಗವಂತರ ಕೊರಳಲ್ಲಿ ಲಿಂಗವಿದ್ದರೆ ಇವರ ಕೊರಳಲ್ಲಿ ಬಿಚ್ಚಿ ನೋಡಿದರೆ ತಲೆಬುರುಡೆ ನಾನು ಎಷ್ಟೋ ಸಲ ಲಿಂಗವಿರಬೇಕೆಂದ ಕಲ್ಪನೆ ನನಗಿತ್ತು. ನಾನು ಅವರನ್ನು ಕೇಳಿದಾಗ ಬಿರಾದಾರ ಅವರೇ ಹುಟ್ಟಿದವನು ಸಾಯಲೇಬೇಕು. ಇದು ನನಗೆ ಮುನ್ನೆಚ್ಚರಿಕೆ ಕೊಡುತ್ತದೆ. ಅದಕ್ಕೆ ನಾನು ಹಾಕಿಕೊಂಡಿದ್ದ, ಒಂದು ದಿನ ನೀನು ಈ ರೀತಿ ಆಗತಿಬೇಕೆಂದು ನನೀನು ಏನಾದರು ಮಾಡು ಮೊದಲು ಮಾನವನಾಗು ಎಂಬ ಮಂತ್ರ ನನಗೆ ಹೇಳಿಕೊಡುತ್ತದೆ. ಅದರಿಂದಲೇ ನಾನು ಶ್ರಮಿಸುತ್ತಿದ್ದೇನೆ ಎಂಬ ಕಿವಿ ಮಂತ್ರ ಹೇಳಿದ್ದರು. ನನ್ನ ಲಿಂಗ ತಲೆಬುರುಡೆಯಾಗಿ ನಿನ್ನ ಜೊತೆಯಲ್ಲಿ ಬರುವ ಕಾಲ ಸಂದಿದೆ ಎಂಬ ಮಾತು ಸಾಕಾರವಾಗಿದೆ ಎಂದರೆ ತಪ್ಪಿಲ್ಲ. ಅವರು ನನಗೆ ದೇವರ ಗುಡಿಯ ಗಂಟೆಯಾಗಿದ್ದರು. ಇನ್ನುವರೆಗೆ ಅವರ ನಾದದ ಶಬ್ದ, ನಿಶಬ್ದವಾಗಿದ್ದರು ನನ್ನನ್ನು ಎಚ್ಚರಗೊಳಿಸುತ್ತದೆ. ಅವರನ್ನು ಕೊನೆಗಳಿಗೆಯಲ್ಲಿ ಮಾತಾಡಿದ್ದು ಹೀಗೆ ಮುರಗೋಡರವರೆ ಮಲಗಿದ್ದಿರಾ ಕಣ್ಣು ತೆರೆದರು ನನ್ನನ್ನು ನೋಡಿ ನಕ್ಕರು ಮತ್ತೆ ಕಣ್ಣು ಮುಚ್ಚಿದ್ದರು ಮತ್ತೆ ಮಾತಾಡಲಿಲ್ಲ. ಜೀವನ ನೀರಿನ ಗುಳ್ಳೆ ಹಾಗೆ ನೋಡಲು ಚನ್ನಾಗಿ ಕಾಣುತದೆ. ಕ್ಷಣಾರ್ಧದಲ್ಲಿ ಸಂತೋಷದ ಮಡಿಲಿನಲ್ಲಿಯೊ ನಂದಿಹೋಗುತ್ತದೆ. ತಲೆಯ ಮೆದಳು ತಲೆಬುರುಡೆಯ ಮರ್ಮದ ವ್ಯತ್ಯಾಸ ಮುರಗೋಡ ಕಲಾಕೃತಿಯಿಂದ ತಿಳಿಹೇಳಿದ್ದು ಬಹುಮಾರ್ಮಿಕವಾಗಿದೆ.

ಮುರಗೋಡರವರು ಮೇರು ಪರ್ವತದ ಶಿಖರವನ್ನೇರಿದವರು, ಇವರ ಸಮಭಾವ ಸಮಚಿತ್ರ ಸಮಪ್ರೇಮಕ್ಕೆ ಹೆಸರಾದವರು. ಇದಕ್ಕೆಲ್ಲ ಕಾರಣ ಪತಿಗೆ ತಕ್ಕ ಸತಿಯಾದ ಶ್ರೀಮತಿ ಶಾಲನ್ ಮುರಗೋಡ, ಪತಿಯ ಎಲ್ಲ ಸಾಧನೆಗೆ ಸಾಕ್ಷಿಯಾಗಿ ನಿಂತಿದ್ದಾರೆ. ಪತಿಯ ಕಷ್ಟಸುಖದಲ್ಲಿ ಸಹಭಾಗಿಯಾಗಿ ಕೆಲಸ ಮಾಡಿದ ಇವರು ದಾಂಪತ್ಯ ಜೀವನದ ಆದರ್ಶಗಳಿಗೆ ಮುಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ.

ಶ್ರೀ ಮುರಗೋಡರವರು ಯಾವ ಆಸೆ ಆಮಿಷಗಳಿಗೆ ತಲೆಬಾಗಲಿಲ್ಲ. ಇವರ ನಿಸ್ವಾರ್ಥ ಸೇವೆ ಇವರ ಪ್ರಾಮಾಣಿಕತೆ, ಇವರ ಸಂಘಟನಾಶಕ್ತಿಗೆ ಅನೇಕ ಸ್ಥಾನಮಾನಗಳು ಬಯಸದೆ ಹಿಂಬಾಲಿಸಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಝಾನ್ಸಿರಾಣಿಪ್ರಶಸ್ತಿ, ಯು.ಎಸ್.ಎ.ಕಮಿಟಿ ಪ್ರಶಸ್ತಿ, ಮಾನವ ಸೇವಾಪದಕ, ಆದಿಶಂಕರರಾಚಾರ್ಯ ಪ್ರಶಸ್ತಿ, ಭೀಮಕಲಾಬಿರುದು ಇವರ ಇಡೀ ಜೀವನವನ್ನು ವೀಕ್ಷಿಸಿದಾಗ ಒಂದಿಲ್ಲ ಒಂದು ಅತ್ಯುನ್ನತ ಬಿರುದುಗಳು ಬೆನ್ನಟ್ಟಿ ಬಂದಿವೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಭೀಮು ಅವರು ಮಾರ್ಚ 1, 1945 ರಂದು ಗೋಕಾಕ ತಾಲೂಕಿನ ಸಿಂಕಿಕುರುಚಿಟ್ಟ ಗ್ರಾಮದಲ್ಲಿ ತಂದೆ ಫಕೀರಪ್ಪ ತಾಯಿ



ಎಲ್ಲವ್ವವರ ಪವಿತ್ರ ಗರ್ಭದಿಂದ ಜನಿಸಿದವರು. ಹರಳಯ್ಯ ಸಮಾಜದವರು ದೀನ ದಲಿತ ಸಾಧು–ಸಂತರ ಸೇವೆಗಾಗಿ ಬಾಳಿ ಬದುಕಿದವರು, ಮುರಗೋ ಕುಟುಂಬದ ಪರಿವಾರದ ಸಂಸ್ಕಾರದ ಫಲದಿಂದ ಭೀಮು ಅವರು ಮನುಷ್ಯರಾಗಿ ಬಾಳಲು ಸಾಧ್ಯವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಇವರು 18 ಗಂಟೆಗಳ ಕಾಲ ವಿವಿಧ ಸೇವೆಗಳಲ್ಲಿ ನಿರಂತರ ಸೇವೆ ಮಾಡುವುದು ಸಾಮಾನ್ಯ ಕೆಲಸವಲ್ಲ. ಶ್ರೀಯುತರು ತಮ್ಮ ಜೀವನದುದ್ದಕ್ಕೂ ಶಿವಶರಣರ ತತ್ವಗಳನ್ನು ಪರಿಪಾಲಿಸಿಕೊಂಡು ಬಂದಿದ್ದಾರೆ. ಬುದ್ಧನ ರಮೆ, ಬಸವಣ್ಣನ, ಮುಗ್ದತೆ, ಗಾಂಧೀಜಿಯವರ ಸರಳತೆ, ಅಂಬೇಡ್ಕರ್ ಅವರ ಹೋರಾಟ, ಮದರ ಥೇರೆಸಾ ಅವರ ಸೇವಾಭಾವ, ಕುವೆಂಪು ಅವರ ನಾಡು ನುಡಿ ಪ್ರೇಮವನ್ನು ಅಳವಡಿಸಿಕೊಂಡಿದ್ದು ವಿಶೇಷವಾಗಿದೆ. ದೂರದ ದೆಹಲಿಯಲ್ಲಿ ವಾಸವಾಗಿದ್ದರು. ತನ್ನ ಮಾತ್ರಭೂಮಿ, ಹುಟ್ಟಿದ ನೆಲ, ಮಾತೃಭಾಷೆ ಬಗೆಗೆ ಅಪಾರ ಪ್ರೇಮವನ್ನು ಇಟ್ಟುಕೊಂಡಿದ್ದವರಾಗಿದ್ದಾರೆ. ಬಸವಣ್ಣನವರ ಕೈಯಲ್ಲಿ ಹಿಡಿದ ಲಿಂಗದ ಭಾವಚಿತ್ರ ಕರ್ನಾಟಕ ಎಲ್ಲ ಮೂಲೆ ಮೂಲೆಗಳಲ್ಲಿ ಪಸರಿಸಿದೆ. ಪೂಜೆಯ ಮನೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ಹೀಗೆ ನಮ್ಮ ಸಮಾಜಕ್ಕೆ ನಾಡಿಗೆ ದೇಶಕ್ಕೆ ಮಾನವಕುಲಕ್ಕೆ ಏನು ಕೊಡಬೇಕು ಎಂಬ ಚಿಂತನೆಯ ಇವರನ್ನು ಕಲೆ, ಸಾಹಿತ್ಯ, ಸಂಗೀತ, ಸಮಾಜ ಸೇವೆಯಲ್ಲಿ ತೊಡಗಿಸಿದರೆಂಬ ಭಾವ ತೋರುತ್ತದೆ. ಇಷ್ಟು ದೊಡ್ಡ ಕಲಾವಿದನನ್ನು ನಾಲ್ಕು ದಶಕಗಳ ಅವಧಿಯಲ್ಲಿ ಸಾವಿರಾರು ಸಲ ನನ್ನ ಮನೆಗೆ ಬಂದಿದ್ದರು. ಸಾವಿರಾರು ವಿಚಾರಗಳು ಹೇಳಿದ್ದರು. ಅಂತಹ ವ್ಯಕ್ತಿ ಇನ್ನು ಇಲ್ಲ. ಆದರೂ ಅವರ ಆಚಾರ, ವಿಚಾರ ನಮ್ಮೆದುರು ಸುಳಿಯುತ್ತಲೆ ಇರುತ್ತದೆ. ಅವನ್ನು ನಾವು ಮುಂದುವರೆಸಿಕೊಂಡು ಹೋಗಬೇಕು ಅನ್ನುವುದೆ ನನನ್ನ ಕಳಕಳಿಯ ಭಿನ್ನಹವಾಗಿದೆ.

ಓರ್ವ ಪ್ರಸಿದ್ಧ ಚಿತ್ರಶಿಲ್ಪಿಯಾದ ಭೀಮು ಅವರು ನನ್ನ ಮನೆಯ ಭಕ್ತಿಯ ಸಂಬಂಧಿಕರು ಒಳ್ಳೆಯ ಬಾಂಧವ್ಯ ಬೆಳೆಸಿಕೊಂಡು ಬಂದವರು. ನಮ್ಮ ಮಕ್ಕಳು ಅವರ ಮಕ್ಕಳಲ್ಲಿ ಅನ್ಯೋನ್ಯ ಪ್ರೇಮ, ಭಾಂಧವ್ಯ ಬೆಳೆಸಿದವರು. ನಮ್ಮೆಲ್ಲರೊಂದಿಗೆ ಹಬ್ಬ ಹುಣ್ಣಿಮೆಯಲ್ಲಿ ಬಎರೆತು ತಮ್ಮ ಸುಖ ದುಃಖ ಹಂಚಿಕೊಂಡು ಬಾಳುತ್ತಿದ್ದ ಒಬ್ಬ ಶ್ರೇಷ್ಠ ವ್ಯಕ್ತಿ ಎಂದು ಹೇಳಬಹುದು.

ಅವರ ಕನ್ನಡ ಕಲಾಸಾಧಕ ಹಾಗೂ ಅಂತಹ ತಪಸ್ವಿಯ ಬಗ್ಗೆ ಅವರು ಕಲೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರು ಬರೆದ ಚಿತ್ರಕಲಾ ಪ್ರದರ್ಶನ ಏರ್ಪಡಿಸುವುದು, ವಿಚಾರ ಸಂಕೀರ್ಣ ಅವರ ಕಲಾ ಪ್ರತಿಭೆಗೆ ತಕ್ಕ ಪುರಸ್ಕಾರ ಯೋಗ್ಯ ಸನ್ಮಾನ ಪದ್ಮಶ್ರೀ ಪ್ರಶಸ್ತಿ ಹಾಗೂ ಕರ್ನಾಟಕ ಸಂಘದಲ್ಲಿ ಮುರಗೋಡ ಆರ್ಟ ಗ್ಯಾಲರಿ ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈ ಮಹಾನ್ ಕನ್ನಡ ಕಲಾಸಾಧಕನ ತಪಸಿಗೆ ಪ್ರೋತಾಹಿಸಿ ಈ ಕಲೆ ನಿರಂತರ ಮುಂದಿನ ಪೀಳಿಗೆಗೆ ನಾಂದಿಯಾಗಲೆಂದು ಹಾರೈಸುತ್ತೇವೆ.

**ವಿ.ವಿ.ಬಿರಾದಾರ**



# ಅಂಬಿಕೇಶ್ ಸ್ಮಾರಕ
# ಮೂರನೆ ಬಾರಿ ಟ್ರೋಫಿಯನ್ನು ತನ್





ದೆಹಲಿ ಕರ್ನಾಟಕ ಸಂಘದ ವತಿಯಿಂದ ನಡೆಯುವ ವಾರ್ಷಿಕ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಟ್ರೋಫಿಯನ್ನು ತನ್ನ ಅಭೂತಪೂರ್ವ ಆಟದ ಪ್ರದರ್ಶನದ ಮೂಲಕ ದೆಹಲಿ ತುಳುಸಿರಿ ತಂಡವು ಮೂರನೆ ಬಾರಿಗೆ ತನ್ನದಾಗಿಸಿತು. ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಇದೇ ಅಕ್ಟೋಬರ್ 13 ಮತ್ತು 14ರಂದು ದೆಹಲಿಯ ತಾಲ್ಕತೋರ ಕ್ರಿಕೆಟ್ ಮೈದಾನದಲ್ಲಿ ನಡೆಯಿತು. ಈ ಬಾರಿಯು ಫೈನಲ್ ಪಂದ್ಯಾಟವು ದೆಹಲಿ ತುಳುಸಿರಿ ತಂಡ ಮತ್ತು ಜೆ.ಎಸ್. ಎಸ್., ನೋಯ್ಡಾ ತಂಡಗಳ ಜೊತೆ ನಡೆಯಿತು. ಈ ಫೈನಲ್ ಪಂದ್ಯಾಟವು 15 ಓವರ್‌ಗಳಾಗಿದ್ದಿತು. ಟಾಸ್ ಗೆದ್ದ  ಜೆ.ಎಸ್. ಎಸ್., ನೋಯ್ಡಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತುಳು ಸಿರಿ ತಂಡವು ಜೆ.ಎಸ್.ಎಸ್, ನೋಯ್ಡಾ ತಂಡಕ್ಕೆ 123 ರನ್‌ಗಳ ಲಕ್ಷ್ಯವನ್ನು ನೀಡಿತು. ಆದರೆ ಜೆ.ಎಸ್.ಎಸ್. ತಂಡವು ಈ ಲಕ್ಷ್ಯವನ್ನು ಮುಟ್ಟುವಲ್ಲಿ ವಿಫಲಗೊಂಡಿತು. ದೆಹಲಿ ತುಳು ಸಿರಿ, ತಂಡವು ಮೂರನೆ ಬಾರಿಗೆ ಅಂಬಿಕೇಶ್ ಸ್ಮಾರಕ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಡಾ. ಸಚಿತ್ ಶೆಟ್ಟಿ ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ದೆಹಲಿ ಕರ್ನಾಟಕ ಸಂಘವು ಏರ್ಪಡಿಸಿದ, ಸಂಘದ ಮಾಜಿ ಅಧ್ಯಕ್ಷ ದಿ. ಕೆ.ಆರ್. ನಾಗರಾಜರವರ ಪುತ್ರ ದಿ. ಅಂಬಿಕೇಶ್ ಸ್ಮಾರಕ 2018–19ರ ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಟ್ಟು 9 ಕನ್ನಡ ತಂಡಗಳು ಭಾಗವಹಿಸಿದ್ದವು. ಕ್ರೀಡಾ ಸಮಿತಿಯ ಅಧ್ಯಕ್ಷ ಡಾ.ಎಂ.ಎಸ್. ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಧಾಕೃಷ್ಣ, ಶ್ರೀ ತ್ಯಾಗೇಶ್ ಮೂರ್ತಿ ಅವರು ಪಂದ್ಯಾವಳಿ ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು.

ಅಂಬಿಕೇಶ್ ಸ್ಮಾರಕ ಟ್ರೋಫಿಯನ್ನು ಪ್ರದಾನ ಮಾಡಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಆಟವನ್ನು ಶಿಸ್ತುಬದ್ಧವಾಗಿ ನಡೆಸಲು ಸಹಕರಿಸಿದ ಎಲ್ಲಾ ಕ್ರೀಡಾಪಟುಗಳಿಗೆ ಧನ್ಯವಾದ ಅರ್ಪಿಸಿದರು. ದೆಹಲಿ ತುಳು ಸಿರಿ ತಂಡವು ಸತತವಾಗಿ ಮೂರು ಬಾರಿ







# ಕ್ರಿಕೆಟ್ ಪಂದ್ಯಾವಳಿ
# ನ್ನದಾಗಿಸಿದ ದೆಹಲಿ ತುಳುಸಿರಿ ತಂಡ

ತನ್ನದಾಗಿಸಿಕೊಂಡಿದ್ದರಿಂದ ಇನ್ನು ಮುಂದೆ ಈ ಟ್ರೋಫಿ ದೆಹಲಿ ತುಳು ಸಿರಿ, ತಂಡವದವರದ್ದೇ ಆಗಿರುತ್ತದೆ ಎಂದು ತನ್ನ ಖುಷಿಯನ್ನು ವ್ಯಕ್ತಪಡಿಸಿದರು.

ಮೊದಲ ಸುತ್ತಿನ ಪಂದ್ಯದಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್ ಮತ್ತು ಕರಾವಳಿ ಚಾಂಪಿಯನ್  ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್ ತಂಡವು ಟಾಸ್ ಗೆದ್ದು ತಂಡವು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರಾವಳಿ ಚಾಂಪಿಯನ್ಸ್ ತಂಡವು ಬೆಳಿಪ್ಪಾಸ್ ಗ್ರೂಪ್ ತಂಡಕ್ಕೆ ಜಯಗಳಿಸಲು 59ರನ್‌ಗಳ ಲಕ್ಷ್ಯವನ್ನು ನೀಡಿತು. ಬೆಳ್ಳಿಯಪ್ಪಾಸ್ ತಂಡವು 7ವಿಕೆಟ್‌ಗಳಿಂದ ಜಯ ಸಾಧಿಸಿತು. 23 ರನ್ ಮತ್ತು 1 ವಿಕೆಟ್ ಪಡೆದ ಬೆಳ್ಳಿಯಪ್ಪಾಸ್ ಗ್ರೂಪ್ ತಂಡದ ಚಂಗಾ ರೆಡ್ಡಿ ಅವರು ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಎರಡನೇ ಪಂದ್ಯದಲ್ಲಿ ಕೆ.ಬಿ.ಎಲ್. ರೈಡರ್ಸ್, ತಂಡ ಮತ್ತು ಗುರ್‌ಗಾಂವ್ ಕನ್ನಡ ಸಂಘ, ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆ.ಬಿ.ಎಲ್ ತಂಡವು ಗುರ್‌ಗಾಂವ್ ಕನ್ನಡ ಸಂಘ ತಂಡಕ್ಕೆ ತಂಡಕ್ಕೆ 61ರನ್‌ಗಳ ಲಕ್ಷ್ಯವನ್ನು ನೀಡಿತು. ಕೆ.ಬಿ.ಎಲ್. ತಂಡವು 8 ವಿಕೆಟ್‌ಗಳಿಂದ ಜಯ ಸಾಧಿಸಿತು. ಕೆ.ಬಿ.ಎಲ್. ತಂಡದ ಜಿ.ಎಸ್. ಮೂರ್ತಿ ಅವರ ಅದ್ಭುತ ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರಾದರು.

ಮೂರನೇ ಪಂದ್ಯದಲ್ಲಿ ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ತಂಡ ಹಾಗೂ ಹಾಗೂ ಕರ್ನಾಟಕ ಭವನ ಇಲೆವೆನ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ತಂಡವು ಕರ್ನಾಟಕ ಭವನ ಇಲೆವೆನ್ ತಂಡಕ್ಕೆ 101 ರನ್‌ಗಳ ಲಕ್ಷ್ಯವನ್ನು ನೀಡಿತು. ಕರ್ನಾಟಕ ಭವನ ಇಲೆವೆನ್ ತಂಡವು ಈ ಗುರಿಯನ್ನು ಮುಟ್ಟುವಲ್ಲಿ ವಿಫಲವಾಯಿತು. ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು ಸೆಮಿಫೈನಲ್ ಹಂತವನ್ನು ಮುಟ್ಟಿತು. 24 ರನ್ ಮತ್ತು 2 ವಿಕೆಟ್‌ಗಳನ್ನು ಪಡೆದ ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ತಂಡದ ಸಂಜಯ್ ಟಿ.ಸಿ. ಅವರು ಪಂದ್ಯ ಪುರುಷೋತ್ತಮರಾದರು.

ನಾಲ್ಕನೇ ಪಂದ್ಯದಲ್ಲಿ ಕ್ರೀಡಾ ಬಳಗ ಹಾಗೂ ಕಳೆದ ಬಾರಿಯ ರನ್ನರ್ ಅಪ್ ಆದ ಜೆ.ಎಸ್. ಎಸ್., ನೋಯ್ಡಾ ತಂಡಗಳ ನಡುವೆ ನಡೆದ











ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕ್ರೀಡಾ ಬಳಗ ತಂಡವು ಜೆ.ಎಸ್.ಎಸ್., ನೋಯ್ಡಾ ತಂಡಕ್ಕೆ 54ರನ್‌ಗಳ ಲಕ್ಷ್ಯವನ್ನು ನೀಡಿತು. ಜೆ.ಎಸ್.ಎಸ್., ನೋಯ್ಡಾ ತಂಡವು ಯಾವುದೇ ವಿಕೆಟ್‌ಗಳನ್ನು ಕಳೆದುಕೊಳ್ಳದೆ ಈ ಗುರಿಯನ್ನು ಯಶಸ್ವಿಯಾಗಿ ಮುಟ್ಟಿತು. ಜೆ.ಎಸ್.ಎಸ್. ತಂಡದ ನಾಯಕ ಸುರೇಶ್ ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಐದನೇ ಪಂದ್ಯವು ಕಳೆದ ಬಾರಿಯ ವಿನ್ನರ್ ಆದ ದೆಹಲಿ ತುಳು ಸಿರಿ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತುಳು ಸಿರಿ ತಂಡವು ಉತ್ತಮ ಬ್ಯಾಟಿಂಗ್ ಪ್ರದರ್ಶನದಿಂದ ಬೆಳ್ಳಿಯಪ್ಪಾಸ್ ಗ್ರೂಪ್ ತಂಡಕ್ಕೆ 116 ರನ್‌ಗಳ ಲಕ್ಷ್ಯವನ್ನು ನೀಡಿತು. ದೆಹಲಿ ತುಳು ಸಿರಿ ತಂಡದ ಮಿಥುನ್ ಶೆಟ್ಟಿ ಅವರ ಉತ್ತಮ ಬ್ಯಾಟಿಂಗ್ ಬೌಲಿಂಗ್ ಪ್ರದರ್ಶನಕ್ಕೆ ಪುರುಷೋತ್ತಮರೆನಿಸಿಕೊಂಡರು.

ಮೊದಲ ಸೆಮಿಫೈನಲ್ ಕೆ.ಬಿ.ಎಲ್. ರೈಡರ್ಸ್ ಮತ್ತು ಜೆ.ಎಸ್.ಎಸ್. ನೋಯ್ಡಾ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಕೆ.ಬಿ.ಎಲ್. ರೈಡರ್ಸ್ ತಂಡವು ತಂಡವು ಜೆ.ಎಸ್.ಎಸ್. ತಂಡಕ್ಕೆ 78ರನ್‌ಗಳ ಲಕ್ಷ್ಯವನ್ನು ನೀಡಿತು. ಜೆ.ಎಸ್.ಎಸ್. ತಂಡವು ಈ ಮೊತ್ತವನ್ನು ಸುಲಭವಾಗಿ ಬೆನ್ನಟ್ಟುವಲ್ಲಿ ಸಫಲವಾಯಿತು. ಜೆ.ಎಸ್.ಎಸ್., ನೋಯ್ಡಾ ತಂಡವು ಮತ್ತೊಮ್ಮೆ ಫೈನಲ್ ಹಂತವನ್ನು ತಲುಪಿತು. ಜೆ.ಎಸ್.ಎಸ್.ನ ಕಾರ್ತಿಕ್ ಅವರು ಪಂದ್ಯಪುರುಷೋತ್ತಮರೆನಿಸಿ ಕೊಂಡರು.

ಎರಡನೇ ಸೆಮಿಫೈನಲ್ ದೆಹಲಿ ತುಳುಸಿರಿ ಮತ್ತು ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ತಂಡಗಳ ಜೊತೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ತಂಡವು ದೆಹಲಿ ತುಳು ಸಿರಿ ತಂಡಕ್ಕೆ ಜಯ ಗಳಿಸಲು 53 ರನ್‌ಗಳನ್ನು ಲಕ್ಷ್ಯವನ್ನು ನೀಡಿತು. ದೆಹಲಿ ತುಳು ಸಿರಿ ತಂಡವು ಈ ಮೊತ್ತವನ್ನು ಬೆನ್ನಟ್ಟುವಲ್ಲಿ ಸಫಲವಾಯಿತು ಮತ್ತು ಫೈನಲ್ ಹಂತವನ್ನು ಮುಟ್ಟಿತು. ಮಿಥುನ್ ಶೆಟ್ಟಿ ಅವರ ಉತ್ತಮ ಪ್ರದರ್ಶನಕ್ಕೆ ಎರಡನೇ ಬಾರಿ ಪಂದ್ಯಪುರುಷೋತ್ತವ ರೆನಿಸಿಕೊಂಡರು.

***ಅಭಿಮತ ವರದಿ***

## ಬಹುಮುಖ ಪ್ರತಿಭೆಯ ಕು.ವರಲಕ್ಷ್ಮಿ



ಕುಮಾರಿ ವರಲಕ್ಷ್ಮಿ ಅಕ್ಟೋಬರ್‌ನಲ್ಲಿ ಹಾಂಕ್‌ಕಾಂಗ್ ನಲ್ಲಿ ನಡೆದ World Inter School Rope Skipping Championship 2018 ರಲ್ಲಿ ಭಾರತದ ಪರವಾಗಿ ಭಾಗವಹಿಸಿ ಎರಡು ಕಂಚಿನ ಪದಕಗಳನ್ನು ಪಡೆದು ಭಾರತಕ್ಕೆ ಕೀರ್ತಿ ತಂದುಕೊಟ್ಟಿದ್ದಾರೆ. ದೆಹಲಿಯ ಕಾರ್ಮೆಲ್ ಕಾನ್ವೆಂಟ್‌ನಲ್ಲಿ ಆರನೇ ತರಗತಿಯುವರೆಗೆ ಪ್ರಾಥಮಿಕ ವಿದ್ಯಾಭ್ಯಾಸ ಪಡೆದ ವರಲಕ್ಷ್ಮಿ ತನ್ನ ಮುಂದಿನ ಕಲಿಕೆಗಾಗಿ ಅಯ್ಕೆಮಾಡಿದ್ದು ಶಿಸ್ತುಬದ್ಧ ವಿದ್ಯಾಭ್ಯಾಸಕ್ಕೆ ಹೆಸರಾದ ಕರ್ನಾಟಕದ ಕಿತ್ತೂರಿನಲ್ಲಿರುವ ಪ್ರತಿಷ್ಠಿತ ರಾಣಿ ಚೆನ್ನಮ್ಮ ರೆಸಿಡೆನ್ಷಿಯಲ್ ಸೈನಿಕ್ ಸ್ಕೂಲ್ ಫಾರ್ ಗರ್ಲ್ಸ್, ಈ ಶಾಲೆಯಲ್ಲಿ ಆರನೇ ತರಗತಿಯಿಂದ ವಿದ್ಯಾಭ್ಯಾಸ ಪಡೆಯುತ್ತ ಅದರೊಂದಿಗೆ, ಬಾಸ್ಕೆಟ್ ಬಾಲ್, ಕುದುರೆ ಸವಾರಿ, ಈಜುಗಾರಿಕೆ, ರೋಲರ್ ಸ್ಕೇಟಿಂಗ್ ನಂತಹ ಸಾಹಸ ಕ್ರೀಡೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಳು. ಇಷ್ಟೇ ಅಲ್ಲದೆ, ಕರಾಟೆ ಮತ್ತು ರೋಪ್ ಸ್ಕಿಪ್ಪಿಂಗ್ ಕ್ರೀಡೆಯಲ್ಲಿಯೂ ಸಹ ರಾಜ್ಯ ಮಟ್ಟದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಬಂಗಾರ ಪದಕ, ಬೆಳ್ಳಿ ಪದಕ ಹಾಗೂ ಕಂಚಿನ ಪದಕಗಳನ್ನು ಪಡೆದು ಕರ್ನಾಟಕ ರಾಜ್ಯಕ್ಕೆ ಕೀರ್ತಿಯನ್ನು ತಂದಿರುತ್ತಾಳೆ. ಮುಂಬರುವ ದಿನಗಳಲ್ಲಿ ಬ್ಯಾಂಕಾಂಗ್‌ನಲ್ಲಿ ನಡೆಯುವ ಏಷಿಯನ್ ರೋಪ್ ಸ್ಕಿಪ್ಪಿಂಗ್ ಚಾಂಪಿಯನ್‌ಷಿಪ್ 2019ರಲ್ಲಿ ಭಾಗಹಿಸಲಿದ್ದಾಳೆ. ಕುಮಾರಿ ವರಲಕ್ಷ್ಮಿ ದೆಹಲಿ ಕರ್ನಾಟಕ ಸಂಘದ ಸದಸ್ಯೆ ಹಾಗೂ ಕರ್ನಾಟಕ ಭವನದಲ್ಲಿ ಕಚೇರಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಕುಸುಮಾ ಹಾಗೂ ದೆಹಲಿ ಪೋಲೀಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಎಸ್.ಪಳನಿಯವರ ಪುತ್ರಿ. ಕುಮಾರಿ ವರಲಕ್ಷ್ಮಿ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.


# ಇನ್ನಿಲ್ಲವಾದ ಮುರಗೋಡ ಮಿಡಿದ ಕಂಬನಿಗಳು

ಇತಿಹಾಸವು ಕೇವಲ ಒಂದು ನಾಡು, ದೇಶ, ಖಂಡ, ಪ್ರಪಂಚಕ್ಕೆ ಮಾತ್ರ ಸೀಮಿತವಾಗದೆ ಒಂದು ಸಂಸಾರ, ಮನೆ ಬಂಧು ಬಾಂಧವ್ಯ ಎಲ್ಲರಿಗೂ ಅನ್ವಯಿಸುತ್ತದೆ.

**ಭೀ**ತಿಯಿಲ್ಲದೆ ಸರ್ವರೊಡನೆ ಬಾಳಿದ
**ಮ**ನೋಸ್ಥೈರ್ಯದಿಂದ ಎಲ್ಲರೂ ನಮ್ಮವರೆಂದು ಅನು
**ರಾ**ಗದಿಂದ ಒಲವಿನಿಂದ ಕುಟುಂಬ ಸ್ನೇಹಿತರೊಡನೆ ವಾರೆವಾ
**ವ್** ಎಂದು ಆಶ್ಚರ್ಯಪಡುವಂತೆ ಸಂತೋಷ ಸಂತೃಪ್ತಿಯಿಂದ
**ಮು**ಕ್ತ ಮನಸ್ಸಿನಿಂದ ಹೃದಯದ ಪಟಲದಲ್ಲಿ
**ರಂ**ಗು-ಕುಂಚಗಳಿಂದ ಬಾಳ ಚಿತ್ರವನ್ನು ರೂಪಿಸಿಕೊಂಡು ನಂದ
**ಗೋ**ಕುಲದಂತಹ ಸಂಸಾರದಲ್ಲಿ ತನ್ನನ್ನು ತಾನು ಅಳವಡಿಸಿಕೊಂ
**ಡು** ಮಮತೆಯ ಅಂತಃಕರಣದಿಂದ ಕೂಡಿದ
"ಭೀಮರಾವ್ ಮುರಗೋಡು" ಸಹೋದರನಿಗೆ ಶ್ರದ್ಧಾಂಜಲಿ.

ಸಂಸ್ಕಾರ, ಸಂಪ್ರದಾಯ ಮನೆತನ, ಆಪ್ತರು, ಮಿತ್ರರು ಅವರುಗಳ ವಿಶಿಷ್ಟತೆಗಳಿಂದ "ಬಾಳಿದ ಬದುಕು" ಎಂಬ ಚರಿತ್ರೆ ಉಗಮಿಸುತ್ತದೆ. ಫಕೀರಪ್ಪ ಮುರಗೋಡು ವಂಶವೃಕ್ಷದಡಿ ನಡೆದು ಬಂದ ಸುಪುತ್ರ ಭೀಮರಾವ್ ಅವರ ಸಂಬಂಧ, ಅನುಬಂಧ ವಿಶಿಷ್ಟತೆ ಅರಿಯುವ ಅವಕಾಶ ನನಗೆ 1973ನೇ ಇಸವಿಯಲ್ಲಿ ದೊರಕಿ, ವಿಸ್ಮಯ, ಕುತೂಹಲದಿಂದ ಅವರ "ಸಂಸಾರದ ಸಾರವತ್ತ"ನ್ನು ಅರಿತದ್ದು ಇಂದು ನನಗೆ ಚರಿತ್ರೆಯ ಪುಟಗಳಾಗಿವೆ. 1973ರ ಒಂದು ದಿನ ನನಗೂ, ನನ್ನ ಪತಿ ಡಾ. ಬಿ.ಎಂ. ಚಿಂತಾಮಣಿಯವರಿಗೂ, ಭೀಮರಾವರ ಭೇಟಿ ನಮ್ಮ ಮನೆಯಲ್ಲೇ ಆಯಿತು.

ಅಂದು ಅವರು ನಾಲ್ಕು ಮಕ್ಕಳೊಡನೆ 'ಲಲಿತಪುರ್‌ನಲ್ಲಿ ಕರ್ನಾಟಕ ಎಕ್ಸ್‌ಪ್ರೆಸ್ ಅಪಘಾತವಾಗಿ ಒಂದು ವಾರದ ನಂತರ ನಮ್ಮ ಮನೆಗೆ ಬಂದಿದ್ದರು. ಅವರು ತಮ್ಮ ಆ ಮಕ್ಕಳನ್ನು ದೆಹಲಿ ಕನ್ನಡ ಶಾಲೆಯಲ್ಲಿ ಸೇರಿಸುವ ಪ್ರಯತ್ನದ ಕಾರಣ ಬಂದಿದರು. ಆಗ ನನ್ನ ಪತಿ ದೆಹಲಿ ಕನ್ನಡ ಶಾಲೆಯ ಗೌರವ ಕಾರ್ಯದರ್ಶಿ ಮತ್ತು ಶಿಕ್ಷಣ ವರ್ಗದ ವ್ಯವಸ್ಥಾಪಕರಾಗಿದ್ದ ಕಾರಣ (ಅಡ್ಮಿಷನ್ ಸಮಯ ಮೀರಿದ್ದ ಕಾರಣ) ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ರೀತಿ, ಸಲಹೆ, ಅವಕಾಶ ಬಗ್ಗೆ ತಿಳಿಯಲು ಬಂದಿದ್ದರು. ಆ ಮಕ್ಕಳು ಭೀಮರಾವ್ ಅವರ ಅಣ್ಣ ಈಶ್ವರಪ್ಪ ಮತ್ತು ಅವರ ಪತ್ನಿಯ ಮಕ್ಕಳಾಗಿದ್ದು, ತಂದೆ ತಾಯಿಯರು ಆ ರೈಲು ಅಪಘಾತದಲ್ಲಿ ತೀರಿಕೊಂಡಿದ್ದ ಕಾರಣ ಇವರು ಅವರನ್ನು ಸಾಕಿ ವಿದ್ಯಾಭ್ಯಾಸ ಮುಂದುವರಿಸಲು ನಿಶ್ಚಯಿಸಿದ್ದರು. ಭೀಮರಾವರ ಎಲ್ಲಾ ಮಕ್ಕಳು-ಅಣ್ಣನ ಮಕ್ಕಳೂ ಸೇರಿ ಕನ್ನಡ ಶಾಲೆಯಲ್ಲೇ ಓದಿದರು. ಈಗ ಎಲ್ಲರೂ ತುಂಬಾ ಒಳ್ಳೇ ಕೆಲಸದಲ್ಲಿದ್ದು ಹೆಸರುವಾಸಿಯಾಗಿ ಭೀಮರಾವ್‌ರವರ ಒಂದು ಪುಟ್ಟ ಮನೆಯಲ್ಲಿ ವಿಶಾಲ ಹೃದಯದ ಬಾಳ್ವೆ ಬಾಳುತ್ತಿದ್ದಾರೆ (ಉದಾಹರಣೆ ಆನಂದ ಮುರಗೋಡು, ಕರುಣಾ ಅದೇ ದಿನಗಳಲ್ಲಿ ನಮಗೂ ಸಾಂಸ್ಕೃತಿಕ



ಕಾರ್ಯಕ್ರಮಗಳು ನಾಟಕ, ಸಂಗೀತ, ನೃತ್ಯ ಇತ್ಯಾದಿಗಳಲ್ಲಿ ಅಭಿರುಚಿ ಇದ್ದ ಕಾರಣ "ಕನ್ನಡ ಭಾರತಿ"ಯೊಡನೆ ಸಂಪರ್ಕವಿದ್ದ ಕಾರಣ, ನಾಟಕ ನೋಡಲು ಹೋದಾಗ ಭೀಮರಾವ್‌ರವರ ಅಭಿನಯಕ್ಕೆ ಮಾರುಹೋದೆವು. (ನಾನೇ ಬಿಜ್ಜಳ, ಹಿಟ್ಟಿನ ಹುಂಜ, ಜಿ.ವಿ. ಅಯ್ಯರ್ ನಿರ್ದೇಶನದ ಸಂಸ್ಕೃತ ಶಂಕರಾಚಾರ್ಯ ಚಲನಚಿತ್ರಗಳಲ್ಲಿ ಭೀಮರಾವ್‌ರವರ ಪಾತ್ರ ನಿಸ್ಸೀಮವಾದದ್ದಾಗಿತ್ತು. ಹಿಟ್ಟಿನ ಹುಂಜದ "ಮಾವುತ" ಶಂಕರಾಚಾರ್ಯ ಚಿತ್ರದಲ್ಲಿ ಚಂಡಾಲನ ಪಾತ್ರ ಎಲ್ಲರನ್ನೂ ಬೆರಗುಗೊಳಿಸಿತು.

ಇಂತಹ ವ್ಯಕ್ತಿಯ ಗುಣಗಳು ಅಚ್ಚುಮೆಚ್ಚಾಗಿ ನಮ್ಮ ಸ್ನೇಹ ಬಾಂಧವ್ಯ ಭದ್ರವಾಯಿತು. ನಂತರ ನಮಗೆ ಅವರ ಸಮಾಜ ಸುಧಾರಣಾ ಸಂಸ್ಥೆಯ ಬಗ್ಗೆ ತಿಳಿದು ಇನ್ನೂ ಗಾಢವಾಯಿತು. 'ಫಕೀರಪ್ಪ' ಅವರ ತಂದೆಗೆ ಮುರಗೋಡಿನ ಜನತೆ ಇಟ್ಟ ಹೆಸರು. ಈ ಹೆಸರು ಮಗ ಭೀಮರಾವ್‌ರವರಿಗೂ ಸಲ್ಲಿತು. ಅವರ ತಂದೆ ನಡೆದ ಹಾದಿಯನ್ನು ತಮ್ಮ ಊರಿನಲ್ಲೇ ಅಲ್ಲದೆ ದೆಹಲಿಗೆ ಹೊಟ್ಟೆಪಾಡಿಗೆ ಬಂದರೂ, ತಾವೂ ನಡೆಯುತ್ತಾ ಅವರ ತಂದೆಯಂತೆಯೇ ಸಮಾಜ ಸುಧಾರಣೆ, ಜಾತ್ಯಾತೀತ ಭಾವನೆಗೆ ತಮ್ಮನ್ನು ಮುಡಿಪಾಗಿಟ್ಟುಕೊಂಡದ್ದಲ್ಲದೆ ತನ್ನ ಕುಟುಂಬದ ಪ್ರತಿ ಸದಸ್ಯರಿಗೂ ಆ ಭಾವನೆಗಳನ್ನು ಬೇರೂರಿದರು. ಅಂತೆಯೇ ಅವರ ಆ ಪುಟ್ಟ ಮನೆಯ ದೊಡ್ಡ ಕುಟುಂಬ ಗಂಡ-ಹೆಂಡತಿ ಏಳು ಮಕ್ಕಳು, ಸೊಸೆಯಂದಿರು 13 ಮೊಮ್ಮಕ್ಕಳೊಡನೆ ಸಹಕಾರದಿಂದ ಸುಂದರವಾಗಿ ಬದುಕಿದ್ದವರು. ಕನ್ನಡಮ್ಮನ ಮಗನಾಗಿ ಮಿತಿಯಿಲ್ಲದಂತೆ ದೆಹಲಿ ಕನ್ನಡಿಗನಾಗಿ ಕೆಲಸ ನಿರ್ವಹಿಸಿದರು.

ಅವರು ತಮ್ಮ "ಬಣ್ಣ ಮತ್ತು ಕುಂಚದ" ಪ್ರಪಂಚದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದೇಶಗಳ ವಿಶೇಷ ವ್ಯಕ್ತಿಗಳ ಚಿತ್ರ ಮುಡಿಸಿದ ಭೀಮರಾಯರು ಅನೇಕ ಪ್ರಶಸ್ತಿಗಳ ಒಡೆಯರಾದರು. ರಾಷ್ಟ್ರಪತಿ ಭವನದ ಎಲ್ಲಾ ಅಧ್ಯಕ್ಷರುಗಳ ಭಾವಚಿತ್ರಗಳು ಭೀಮರಾವ್‌ರವರ ಕುಂಚದಿಂದ ಹೊರ ಮೂಡಿದೆ.

ಭೀಮರಾವ್‌ರವರು ಪ್ರೀತಿಯಿಂದ ನನ್ನ ಪತಿ ಮತ್ತು ನನ್ನ ಭಾವಚಿತ್ರಗಳನ್ನೂ ತಮ್ಮ ಶ್ರೇಷ್ಠ ಕುಂಚದಿಂದ ಮೂಡಿಸಿದ್ದಾರೆ ಎಂದು ತಿಳಿಸಲು ಹೆಮ್ಮೆಯಾಗುತ್ತೆ.

ನನಗೆ ಅವರ ಜೊತೆಯಲ್ಲಿ ಅವರ "ಸರ್ವಧರ್ಮ ಸಮಾಜ ಸುಧಾರಣೆ" ಸಾಮಾಜಿಕ ಪ್ರಗತಿಶೀಲ ಸಂಸ್ಥೆಯ ಎಂಬ ಸಂಸ್ಥೆಯಲ್ಲಿ ನಾನೂ ಸಹ ಹಲವಾರು ವರುಷ ಉಪಾಧ್ಯಕ್ಷೆಯಾಗಿ ಕೆಲಸ ಮಾಡಲು ಅವಕಾಶ ದೊರಕಿತ್ತು. ಅಂತರ್‌ಜಾತಿ ವಿವಾಹ, ಕುಷ್ಠರೋಗಿಗಳ ಆಶ್ರಮದಲ್ಲಿ (ಮೋಹನ್ ಸಿಂಗ್ ಮಾರ್ಕೇಟ್ ಎದುರಿಗೆ ಕುಷ್ಠರೋಗಿಗಳ ಆಶ್ರಯಧಾಮವಿದೆ) ಅವರಿಗೆ ಸಹಾಯ ಸೌಲಭ್ಯ, ಹೆಚ್ಚಿನದಾಗಿ ತಮ್ಮ ಕುಟುಂಬದ ಪ್ರತಿ ಒಬ್ಬರ ಹುಟ್ಟು ಹಬ್ಬವನ್ನು ಅಲ್ಲೇ ಆಚರಿಸುವ ದೃಢ ಮನಸ್ಸು-ಅಲ್ಲಿಯ ಮಕ್ಕಳಿಗೆ ಊಟ, ವಸ್ತ್ರದಾನ ಅನೇಕ ಸಹಾಯಗಳನ್ನು ಜೊತೆ ಜೊತೆಯಲ್ಲಿ ಮಾಡಿದೆವು. ಅದೊಂದು ಕಾಲ! ಅವರ ನಡವಳಿಕೆ, ವಿಚಾರಶೀಲತೆ ಅತ್ಯಂತ ಉನ್ನತ ಮಟ್ಟದ್ದಾಗಿತ್ತು.

ಅನಿಸುವಿಕೆಗಳ ನೂರೆಂಟು
ಇಚ್ಛೆಗಳಿಗೆ ಎಣಿಕೆಯಿಲ್ಲ
ಸತ್ತರೂ ಹಿಂಬಾಲಿಸುವುವು
ಈ ಜೀವನ ಏತಕೆ
ಮಾಡಬೇಕಾದದ್ದು ಇಲ್ಲಿ ಏನು
ಇದೆಲ್ಲಾ ಚಿಂತಿಸಲೇ ಇಲ್ಲ



ಎನ್ನುತ್ತಿದ್ದ ಅವರ ಭಾವನೆಗಳು ಎಷ್ಟು ಸತ್ಯ! ನಿತ್ಯ ಸತ್ಯ! ಎಂದು ಮುಕ್ಕಾಲು ಶತಕ ಬದುಕಿದ್ದ ಭೀಮರಾವ್ ಮುರಗೋಡು ಎಂದೂ ಮರೆಯಲಾಗದ ಧೀಮಂತ ವ್ಯಕ್ತಿ! ಅವರ ಅಂತ್ಯ ಹತ್ತಿರದಲ್ಲಿದೆ ಎಂದು ಯಾರಿಗೆ ಗೊತ್ತಿತ್ತು? ಆದರೆ ಕಡೆಯ ಘಳಿಗೆಯವರೆಗೂ ಆ ಬಿಳಿಗಡ್ಡದಲ್ಲಡಗಿದ್ದ ಸುಂದರ ಭಾವನೆಗಳ ಮುಖಾರವಿಂದ ಎಂದೆಂದೂ ಚಿರನೂತನ.

ಅವರನ್ನು ನನ್ನ ಮತ್ತು ನನ್ನ ಯಜಮಾನರ ಭಾವಚಿತ್ರದಲ್ಲಿ ಪ್ರತಿದಿನ ನೋಡುತ್ತೇನೆ. ಭಾವಚಿತ್ರಗಳಡಿಯಲ್ಲಿ ಅವರ ಸಹಿ ಅವರ ಇರುವಿಕೆಯ ರುಜು.

**ಮೃತ್ಯೋರ್ಮ ಅಮೃತಂಗಮಯ.**
**ಓಂ ಶಾಂತಿಃ ಶಾಂತಿಃ ಶಾಂತಿಃ**

***ಡಾ. ಅಹಲ್ಯಾಚಿಂತಾಮಣಿ***

ಭೀಮರಾವ್ ಮುರುಗೋಡ್ ಅವರ ಕಲಾಕೃತಿಗಳು ಜೀವಂತ ಅನುಭವಗಳಾಗಿವೆ. ಅವರು ಬಿಡಿಸಿದ ಬಸವಣ್ಣನವರ ಅದ್ಭುತ ಕಲಾಕೃತಿ ನಮ್ಮ ಮನೆಯಲ್ಲಿಯೂ ರಾರಾಜಿಸುತ್ತಿದೆ. ಬಸವಣ್ಣನವರು ತಮ್ಮ ಇಷ್ಟಲಿಂಗದ ಜತೆ ಶಾಂತರೂಪದಲ್ಲಿರುವ ಈ ಕಲಾಕೃತಿಯನ್ನು ಮುರುಗೋಡು ಅವರ ಕಲಾಪ್ರತಿಭೆಯ ಗೌರವಾರ್ಥವಾಗಿ ನಮ್ಮ ಮನೆಯಲ್ಲಿರಿಸಿದ್ದೇವೆ. ಅವರು ಮತ್ತು ಅವರ ಧರ್ಮಪತ್ನಿ ಶಾಲನ್ ಅವರು ತಮ್ಮ ಹಸನ್ಮುಖಗಳಿಂದ ನಮ್ಮೆಲ್ಲರ ಆತ್ಮೀಯರಾಗಿದ್ದರು.

ಶಾಲನ್ ಅವರು ಕೂಡಾ ಕಲಾವಿದೆಯಾಗಿ ಬೆಳೆದಿದ್ದಾರೆ. ಅವರು ರಚಿಸಿರುವ ಗೌತಮ ಬುದ್ಧನ ಚಿತ್ರಗಳು ಅವರ ಕಲಾಲೋಕದ ಮತ್ತೊಂದು ವಿಶಿಷ್ಟ ಹೆಜ್ಜೆಗುರುತು ಆಗಿದೆ. ಮುರುಗೋಡ್ ಅವರು ಹಲವಾರು ಪ್ರಧಾನ ಮಂತ್ರಿಗಳ ಹಾಗೂ ರಾಷ್ಟ್ರಪತಿಗಳ ವ್ಯಕ್ತಿಚಿತ್ರಗಳನ್ನು ರಚಿಸಿದ್ದಾರೆ. ಆದರೂ ಅವರಲ್ಲಿ ಯಾವುದೇ ಬಿಗುಮಾನವಿರಲಿಲ್ಲ.

ದೆಹಲಿ ಕರ್ನಾಟಕ ಸಂಘದಲ್ಲಿ ಅವರು ತುಂಬಾ ಸರಳ ವ್ಯಕ್ತಿಯಾಗಿ ಆಗಮಿಸಿ ತಮಗೆ ದೊರೆತ ಯಾವುದೇ ಸೀಟಿನಲ್ಲಿ ಕುಳಿತು ಕಾರ್ಯಕ್ರಮಗಳನ್ನು ವೀಕ್ಷಿಸಿ ತಮ್ಮ ಸ್ನೇಹಿತರೊಡನೆ ಮಾತಾಡಿ ಹೋಗುತ್ತಿದ್ದರು.

ಮುರುಗೋಡ್ ಅವರು ಬಹಳಷ್ಟು ಮಂದಿಗೆ ಆಶ್ರಯದಾತರಾಗಿದ್ದರು. ತನ್ನ ಸೋದರನ ಮಕ್ಕಳನ್ನು ತನ್ನ ಮಕ್ಕಳಂತೆ ಸಾಕಿ ಸಲಹಿದರು.

ಅವರು ನನ್ನ ಹಾಸ್ಯಚಟಾಕಿಗಳನ್ನು ಸಹಿಸಿಕೊಳ್ಳುತ್ತಾ ಇನ್ನಷ್ಟು ಚಟಾಕಿಗಳಿಗೆ ಕಾಯುತ್ತಿದ್ದರು. ಅತ್ಯಂತ ಮಮತಾಮಯಿಯಾಗಿದ್ದ ಅವರು ಎಲ್ಲರನ್ನು ಪ್ರೀತಿಪೂರ್ವಕವಾಗಿ ನೋಡಿಕೊಳ್ಳುತ್ತಿದ್ದರು.

ಅವರಿಲ್ಲದ ಈ ಸಂದರ್ಭದಲ್ಲಿ ನಮ್ಮೆಲ್ಲರ ಮಾಮಾ ಮುರುಗೋಡ್ ಆಗಿದ್ದ ಅವರಿಗೆ ನಮ್ಮ ಗುಡ್‌ಬೈ... ಸಯನೋರಾ ... ಅಂತಿಮ ನಮನ.

***ಬಿ.ಎಸ್. ಕಲ್ಲೂರ್***

# ಇನ್ನಿಲ್ಲವಾದ ಮುರಗೋಡ ಮಿಡಿದ ಕಂಬನಿಗಳು

ಕನ್ನಡ ಭಾರತಿಯ ಪ್ರಮುಖ ಕಲಾವಿದರಾಗಿದ್ದ ಭೀಮರಾವ್ ಮುರುಗೋಡ್ ಅವರನ್ನು ನಾನು ಮೊದಲ ಬಾರಿ ಭೇಟಿಯಾಗಿದ್ದು 1978ರಲ್ಲಿ. ಅದೂ ದೆಹಲಿಯಲ್ಲಿಯೇ. ಅವರೊಬ್ಬ ದೊಡ್ಡ ಚಿತ್ರಕಲಾವಿದ ಎಂದು ತಿಳಿಯುವುದಕ್ಕಿಂತ ಮೊದಲೇ ಗಿಡ್ಡ ಹಾಗೂ ದಪ್ಪಗಿದ್ದ ಅವರ ಎದೆಯಾಳದಿಂದ ಹೊಮ್ಮುತ್ತಿದ್ದ ಮಂದಹಾಸದ ಮುಖ ನಮ್ಮನ್ನು ಹತ್ತಿರ ಸೆಳೆದಿತ್ತು. ನನಗೆ ಅವರ ಕುರಿತು ತಿಳಿದುದು ಅವರನ್ನು ನಾನು ಅಂದು ಭೇಟಿಯಾದ ನಂತರವೇ. ಅವರು ಅದೆಷ್ಟೋ ರಾಷ್ಟ್ರಪತಿಗಳ ಭಾವಚಿತ್ರಗಳನ್ನು ರಚಿಸಿದ್ದರು. ಆದರೂ ಅಂತಹ ಪ್ರತಿಭಾವಂತರಾದ ಅವರು ತಮ್ಮ ಹಿರಿಮೆಯನ್ನು ಎಂದೂ ತೋರಿಸಿಕೊಂಡಿಲ್ಲ. ಯು. ಪ್ರಭಾಕರ್ ರಾವ್ ಅವರ ನಿರ್ದೇಶನದಲ್ಲಿ ದೆಹಲಿಯಲ್ಲಿ ನಾನೇ ಬಿಜ್ಜಳ ನಾಟಕ ಮಾಡುತ್ತಿರುವಾಗ ಅವರು ಅದರಲ್ಲಂದು ಪಾತ್ರ ಮಾಡಿದ್ದರು. ಆಗ ನನ್ನ ಮತ್ತು ಅರ್ಚನಾಳ ಭಾವಚಿತ್ರವನ್ನು ಕೂಡಾ ಅವರು ರಚಿಸಿದ್ದರು. ಟಿ.ಎಸ್. ಸತ್ಯನ್ ಮತ್ತು ಕಾಶಿನಾಥ ಅವರು ತೆಗೆದಿರುವ ಆ ನಾಟಕದ ಛಾಯಾಚಿತ್ರಗಳನ್ನು ನಾನಿಂದೂ ಕಾಪಾಡಿಕೊಂಡು ಬಂದಿದ್ದೇನೆ. ಅತ್ಯಂತ ಜನಮೆಚ್ಚಿಗೆಯಾದ ಈ ನಾಟಕದಲ್ಲಿ ಅವರು ಮತ್ತು ಎಚ್.ಎಸ್. ಕುಲಕರ್ಣಿಯವರು ತಮ್ಮ ನೈಜ ಧಾರವಾಡ ಕನ್ನಡದಲ್ಲಿ ಆಡಿದ ಸಂಭಾಷಣೆಗಳು ಪ್ರೇಕ್ಷಕರನ್ನು ಹುಚ್ಚೆಬ್ಬಿಸಿತ್ತು. ಹಿಟ್ಟಿನ ಹುಂಜ ನಾಟಕದಲ್ಲಿ ಮುರುಗೋಡ್ ಅವರ ಅಷ್ಟಾವಂಕ ಪಾತ್ರ ಅದ್ಭುತವಾಗಿತ್ತು. ಅವರ ಕುರಿತು ಇನ್ನೊಂದು ಅತ್ಯಂತ ಹೆಚ್ಚು ಜ್ಞಾಪಕ ಬರುವ ವಿಷಯ ಎಂದರೆ ಅವರು ತಮ್ಮ ಕುಟುಂಬದಲ್ಲಿ ಉಂಟಾದ ಸಂದಿಗ್ದ ಪರಿಸ್ಥಿತಿಯನ್ನು ಎದುರಿಸಿದ ರೀತಿ. ಇವರಂತೇ ಪ್ರಖ್ಯಾತ ಕಲಾವಿದರಾಗಿದ್ದ ಅವರ ಸೋದರ ರೈಲು ಅಪಘಾತವೊಂದರಲ್ಲಿ ದುರಂತಕ್ಕೀಡಾದರು. ಮಾನವ ಸಹಜವಾದ ಅವರ ಗುಣದಿಂದಾಗಿ ಮುರುಗೋಡ್ ಅವರು ತಮ್ಮ ಸೋದರನ ಮಕ್ಕಳನ್ನು ಎಲ್ಲರೂ ಮೆಚ್ಚುವಂತೆ ಬೆಳಸಿ ಸಲಹಿದರು. ಸಾವನ್ನು ಯಾರೂ ಗೆಲ್ಲಲಾರರು. ಆದರೂ ಮುರುಗೋಡ್ ಅವರಿಗೆ ಸಾವಿನಲ್ಲಿ ಶಾಂತಿ ಸಿಗಲಿ ಎಂದು ಆಶಿಸುವೆನು.

***ಎಚ್.ಜಿ. ದತ್ತಾತ್ರೇಯ***

ಭೀಮರಾವ್ ಮುರುಗೋಡ್ ಅವರ ನಿಧನದ ಸುದ್ದಿ ಕೇಳಿ ದುಃಖವಾಯಿತು. ಕನ್ನಡ ಭಾರತಿಯ ನಮಗೆಲ್ಲರಿಗೂ ತುಂಬಲಾರದ ನಷ್ಟ. ಅವರಂತಹ ಉತ್ತಮ ಗುಣ ಮತ್ತು ನಡತೆಗಳನ್ನು ಪಡೆದಿರುವಂತಹವರನ್ನು ಕಾಣುವುದು ಕಷ್ಟ. ಅವರಲ್ಲಿ ಬಹಳಷ್ಟು ಹಾಸ್ಯಪ್ರಜ್ಞೆ ಇತ್ತು. ಅವರು ತಮ್ಮ ಉತ್ತರ ಕರ್ನಾಟಕ ಶೈಲಿಯಲ್ಲಿ ಹೇಳುತ್ತಿದ ಕತೆಯೊಂದು ನೆನಪಿಗೆ ಬರುತ್ತಿದೆ. ಅವರು ವಾಕಿಂಗ್ ಹೋಗುತ್ತಿದ್ದಾಗ ಪಾರ್ಕ್‌ನಲ್ಲಿ ಸಿಕ್ಕಿದ ನಾಯಿಮರಿಯೊಂದನ್ನು ಮನೆಗೆ ಕರೆದುಕೊಂಡು ಬಂದರು. ಅದರ ಜತೆ ಆಟವಾಡುತ್ತಿದ್ದಾಗ ಅಕಸ್ಮಾತ್ ಅವರ ಕೈಯಲ್ಲಿದ್ದ ಬಂಗಾರದ ಉಂಗುರವೊಂದು ಆ ನಾಯಿಯ ಬಾಯಿಯೊಳಗೆ ಬಿತ್ತು. ಅದನ್ನು ನಾಯಿ ನುಂಗಿತು. ಅವರು ನಾಯಿಗೆ ಬಹುಶಃ ಇದುವರೆಗೆ ಉಣದಷ್ಟು ಊಟವನ್ನು ಕೊಟ್ಟು ಮರುದಿನ ಮುಂಜಾನೆ ಅದರ್ ಹೊಟ್ಟೆಯಿಂದ ಉಂಗುರ ಬರಲೆಂದು ಅವರು ಕಾಯುತ್ತಿದ್ದರು! ನಮ್ಮ ಆತ್ಮೀಯರಾಗಿದ್ದ ಮುರುಗೋಡ್ ಅವರ ಕುಟುಂಬಕ್ಕೆ ನಮ್ಮೆಲ್ಲರ ನೆನಪುಗಳು. ಅವರ ಆತ್ಮಕ್ಕೆ ಶಾಂತಿ ಸಿಗಲಿ.

***ಗುಂಡಣ್ಣ***

ನಾನು 1971–73ರಲ್ಲಿ ಐಐಟಿ ದೆಹಲಿಗೆ ಓದಲು ಬಂದು ಕನ್ನಡಭಾರತಿಯಲ್ಲಿ ಹಯವದನ ನಾಟಕ ಅಭ್ಯಾಸದ ಸಮಯದಲ್ಲಿಅಥವಾ ಅದಾದ ತಕ್ಷಣವೇ ಅವರ ನಗುಮುಖದ ಅದಕ್ಕೂ ಹೆಚ್ಚಾಗಿ ಅವರ ಅಧ್ಬುತ ಅಭಿವ್ಯಕ್ತಿಸುವ ಕಣ್ಣುಗಳನ್ನು ಹೊಂದಿದ್ದ ಪಾದರಸದ ವ್ಯಕ್ತಿಯ ಮೊದಲ ಭೇಟಿ. ಕನ್ನಡಭಾರತಿಯ ಬ್ರೋಶರ್ನ ಮುಖಪುಟದ ಚಿತ್ರವಿನ್ಯಾಸ ಮಾಡುತ್ತಿದ್ದುದು ನೆನಪಿಗೆ ಬಂತು! ನಮ್ಮ ನೆನಪಿನಲ್ಲಿಅವರು ಸದಾ ಇರುತ್ತಾರೆ!

***ಜೆವಿವಿ ಮೂರ್ತಿ, ಕೊಯಮತ್ತೂರು***

ಕನ್ನಡ ಭಾರತಿಯ ನನ್ನ ಅತ್ಯಂತ ಆಪ್ತ ಸ್ನೇಹಿತರಾದ ಭೀಮರಾವ್ ಮುರುಗೋಡ್ ಅವರು ಬೆಂಗಳೂರಿನಲ್ಲಿ ನಿಧನರಾದ ಸುದ್ದಿ ತಿಳಿದು ಆಘಾತವಾಯಿತು. ಅವರ ಅರುವತ್ತನೇ ಹುಟ್ಟು ಹಬ್ಬವನ್ನು ನಾಎಲ್ಲರೂ 2005ರಲ್ಲಿ ಧಾರವಾಡದಲ್ಲಿ ಆಚರಿಸಿದ್ದೆವು. ಅವರ ನಿಧನ ಕಲೆ ಮತ್ತು ರಂಗಭೂಮಿಗೆ ತುಂಬಲಾರದ ನಷ್ಟವಾಗಿದೆ. ಅವರ ವ್ಯಕ್ತಿತ್ವವು ನಿರ್ಮಲವಾಗಿದ್ದು ಪ್ರಾಮಾಣಿಕತೆ ಮತ್ತು ವಿಧೇಯತೆಯನ್ನೊಳಗೊಂಡಿತ್ತು. ನಾವು ಅಂತಹ ಮಹಾನ್ ವ್ಯಕ್ತಿಯೊಬ್ಬರನ್ನು ಕಳೆದುಕೊಂಡೆವು.

***ಎಂ.ವಿ. ನಾರಾಯಣ ರಾವ್***

ಭೀಮರಾವ್ ಮುರಗೋಡ್ ಅವರ ನಿಧನದ ಸುದ್ದಿ ಕೇಳಿ ದುಃಖ ಮತ್ತು ಆಘಾತವುಂಟಾಯಿತು. ಮಹಾನ್ ಕಲಾವಿದರಾಗಿದ್ದರಲ್ಲದೇ ಅತ್ಯಂತ ವಿಶಾಲಹೃದಯೀ ಕೂಡಾ ಆಗಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುವೆ.

***ಎಚ್.ಸಿ. ಪಾರ್ಥಸಾರಥಿ***

## ಸಂಘ ಜೀವಿಯಾಗಿದ್ದ ಭೀಮರಾವ್ ಮುರಗೋಡ

"ಭೀಮು" ನಾವೆಲ್ಲ (ಜ್ಯೋತ್ಸ್ನಾರಾವ್, ಶುಭಾ ದಾಸ್, ಎಚ್ ಎಸ್ ಕುಲಕರ್ಣಿ ಮುಂತಾದವರು) ಅವರ ಮುಗ್ಧ ನಗು ಮುಖವ ನೋಡಿ ಬಲು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು. ನನಗೆ ನನ್ನ ದೆಹಲಿ ವಾಸದ ಮೊದಲ ದಿನಗಳಿಂದಲೂ ಭೀಮು ಮತ್ತು ಅವರ ಅಣ್ಣ ಈಶ್ವರ ಇಬ್ಬರೂ ಮಿತ್ರರಾಗಿದ್ದರು. ನಮ್ಮ ವಿವಿಧ ಹವ್ಯಾಸಗಳಿಂದಾಗಿ, ಹಾಗೂ ಮೂವರ ಆಫೀಸು ವೆಸ್ಟಬ್ಲಾಕ್‌ನಲ್ಲಿಯೇ ಇದ್ದದ್ದು ನಮ್ಮ ಗೆಳೆತನಕ್ಕೆ ಬಲ ನೀಡಿತ್ತು. ಅವರ ಸಾಮಾಜಿಕ ಸುಧಾರಣಾ ಸಂಸ್ಥೆ ಸ್ಥಾಪನೆಯ ಕಾಲದಲ್ಲೂ ಅವರ ಜೊತೆಗೇ ಇದ್ದೆ. ಮೊನ್ನೆ ಮೊನ್ನೆ ನಡೆದಷ್ಟು ನೆನಪಿದೆ. ಅವರ ವ್ಯಕ್ತಿತ್ವವೇ ಅಷ್ಟು ವಿಭಿನ್ನ, ನೋಡಿದವರ ಮನದಲ್ಲಿ ಸದಾ ಕಾಲ ನೆಲೆಸುವಂಥದ್ದಾಗಿತ್ತು. ಓಹ್! ಹೀಗೆ "ಇದ್ದರು" ಎಂದು ಹೇಳಲು ಅಥವಾ ಬರೆಯಲು ಮನ ಒಪ್ಪುತ್ತಿಲ್ಲ, ಆದರೆ ವಿಧಿ ತನ್ನ ಕರ್ತವ್ಯ ನಿಭಾಯಿಸಿ ನಮ್ಮನ್ನು ವಿವಶರನ್ನಾಗಿಸಿದೆ.

ಅವರು ಸಂಘ ಜೀವಿಯಾಗಿದ್ದರು. ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ ಮತ್ತು ಇನ್ನೂ ಅನೇಕ ಸಂಘ ಸಂಸ್ಥೆಗಳಿಗೆ ಇವರು ನೀಡಿದ ಕೊಡುಗೆ ಅಮೋಘವಾದುದು. ಸಂಘ ಜೀವಿಯಷ್ಟೇ ಅಲ್ಲದೆ, ಕೌಟುಂಬಿಕ



ಜೀವನದಲ್ಲಿಯೂ ಅಷ್ಟೇ ಯಶಸ್ವಿ ಪುರುಷರು. ಕುಟುಂಬದ ಎಲ್ಲಾ ಸದಸ್ಯರನ್ನೂ ಯಾವುದೇ ತಾರತಮ್ಯ ಮಾಡದೇ ಒಂದೇ ರೀತಿಯ ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದ ಪರಿ ಅನುಕರಣೀಯವಾಗಿತ್ತು. ತಮ್ಮ ಆದಾಯದಲ್ಲಿಯೇ ಅನಾಥರಾದ ಮಕ್ಕಳನ್ನು ಯಾರಲ್ಲೂ ಅನಾಥ ಪ್ರಜ್ಞೆ ಮೂಡದಂತೆ ಬೆಳೆಸಿ ಎಲ್ಲರನ್ನೂ ಒಂದು ಸುಸ್ಥಿತಿಗೆ ತಂದು ನಿಲ್ಲಿಸಿದ ಪರಿ ನಿಜಕ್ಕೂ ನನಗೆ ಆಶ್ಚರ್ಯ ಉಂಟುಮಾಡುತ್ತದೆ. ಅವರಲ್ಲಿದ್ದ ಈ ಶ್ರೇಷ್ಠ ದರ್ಜೆಯ ಮಾನವೀಯತೆ ನಾವೆಲ್ಲ ಅನುಕರಿಸಲೇಬೇಕಾದದ್ದು. ಅದುವೇ ನಾವು ಅವರಿಗೆ ಅರ್ಪಿಸುವ ನಿಜವಾದ ಶ್ರದ್ಧಾ ಸಮನ. ಇವರು ಉತ್ತಮ ಚಿತ್ರ ಕಲಾವಿದ ಹಾಗೂ ನಟರಾಗಿದ್ದರು ಎಂಬುದು ತಮಗೆಲ್ಲ ಗೊತ್ತೇ ಇದೆ.

ನನ್ನ 38 ವರ್ಷಗಳ ಒಡನಾಟದಲ್ಲಿ ಅವರು ಎಲ್ಲರೊಡನೆ ಮನದುಂಬಿ ಹಂಚಿದ ಪ್ರೀತಿ, ಮುಕ್ತ ವ್ಯವಹಾರ ಕಂಡ ಆ ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡದೇ ಇರಲಾರ, ಆದರೂ ಪ್ರಾರ್ಥಿಸುವೆ ಅವರ ಒಡನಾಟದಲ್ಲಿದ್ದವರಿಗೆ ಅಗಲಿದ ನೋವು ಸಹಿಸುವ ಶಕ್ತಿ ಆದೇವರು ನೀಡಲಿ ಎಂದು. ಓಂ ಶಾಂತಿ.

***ಚೆನ್ನು ಎಸ್. ಮಠದ***

# ಸಂಘದ ಆರ್ಟ್ ಗ್ಯಾಲರಿಯಲ್ಲಿ "ಗಜವರ್ಣ" ಹುತ್ತದ ಮಣ್ಣಿನಿಂದ ಮಾಡಿದ ಚಿತ್ರ-ಕಲಾಕೃತಿಗಳ ಪ್ರದರ್ಶನ



ಮಣ್ಣು ಬೆಳೆಗಾರನಿಗೆ ಎಷ್ಟು ಮುಖ್ಯವೋ ಕಲೆಗಾರನಿಗೂ ಅಷ್ಟೇ ಮುಖ್ಯ ಎಂಬುದು ಈ ಕಲಾಕೃತಿಗಳಿಂದ ಸಾಬೀತಾಗುತ್ತದೆ ಎಂದು ಸಂಘದ ಆರ್ಟ್ ಗ್ಯಾಲರಿಯಲ್ಲಿ ಅಕ್ಟೋಬರ್ 13ರಂದು ಬೆಂಗಳೂರಿನ ಶ್ರೀಮತಿ ಸುಮಿತ್ರಾ ಅವರ "ಗಜವರ್ಣ" ಚಿತ್ರಕಲಾ ಪ್ರದರ್ಶನದ ಉದ್ಘಾಟನೆಯನ್ನು ಮಾಡುತ್ತಾ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಅವರು ಹೇಳಿದರು.
ಅವರು ಮುಂದುವರಿದು ಮಾತನಾಡುತ್ತಾ ಮಣ್ಣು ಬೆಳೆಯನ್ನು ಬೆಳೆಸುತ್ತದೆ. ಕಲೆಯನ್ನೂ ಬೆಳೆಸುತ್ತದೆ. ಕೃತ್ರಿಮ ಬಣ್ಣಗಳನ್ನು ಬಳಸಿ ಚಿತ್ರ ಬಿಡಿಸುವುದನ್ನು ಮಣ್ಣಿನಿಂದ ಮಾಡಿದ ಚಿತ್ರ ಕಲೆಗಳಿಗೆ ಹೋಲಿಸಿದಾಗ ಅದರ ಹಿಂದಿರುವ ಕಲಾತ್ಮಕತೆ ಹಾಗೂ ತಾಳ್ಮೆ ಮತ್ತು ಸೃಜನಾತ್ಮಕತೆಯ ಅರಿವು ಆಗುವುದು ಸಹಜ. ಬೇರೆ ಬೇರೆ ಕಲಾ ಪ್ರಕಾರಗಳಿಗೆ ಹೋಲಿಸಿದರೆ ಒಂದೆಡೆ ಪ್ರದರ್ಶನಗೊಳ್ಳುತ್ತಿರುವಾಗಲೇ ಪ್ರೇಕ್ಷಕರ ಕರತಾಡನ ಕಲಾವಿದರಿಗೆ ಉತ್ತೇಜನ ನೀಡುತ್ತದೆ. ಆದರೆ ಚಿತ್ರಕಲೆಯ ಕಲಾವಿದರ ಕಲಾಪ್ರದರ್ಶನದಲ್ಲಿ ಅಂತಹ ಪ್ರೋತ್ಸಾಹಕ್ಕೆ ಅವಕಾಶವಿಲ್ಲದಿರುವುದು ಹಾಗೂ ಅಂತರ್ಮುಖಿಯಾಗಿ ತದೇಕಚಿತ್ತದಿಂದ ಸೃಜನಾತ್ಮಕತೆಗೆ ರೂಪು ಕೊಡುವುದು ಒಂದು ಯೋಗ ಸಮಾಧಿಯಂತೆ ಇರುತ್ತದೆ. ಪ್ರಕೃತಿಯೊಡನೆ ಬೆಸೆದುಕೊಳ್ಳುವ ಶ್ರೀಮತಿ ಸುಮಿತ್ರ ಅವರು ಮಾಡಿದ ಚಿತ್ರಗಳನ್ನು ಈಗಿನ ಮಕ್ಕಳು ನೋಡಿ ಕಲಿತರೆ ವಿವಿಧ ಕಲಾಸಾಧ್ಯತೆಗಳನ್ನು ಮೈಗೂಡಿಸಲು ಅನುಕೂಲವಾಗಬಹುದು ಎಂದು ಕರೆ ನೀಡಿದರು.
ಭಾಷೆ ಹುಟ್ಟಿಕೊಳ್ಳುವುದಕ್ಕೆ ಮೊದಲೇ ಚಿತ್ರ-ಸಂಜ್ಞೆಗಳ ಮೂಲಕ ಘಟನೆಗಳನ್ನು ರೂಪಿಸುವ ಕಾರ್ಯ ಪ್ರಾರಂಭವಾದ ಕಾರಣದಿಂದಲೇ ಪ್ರಾಯಶಃ ಇಂದು ಸಹ ಹತ್ತಾರು ಪುಟಗಳಲ್ಲಿ ವ್ಯಾಖ್ಯಾನಿಸಬಹುದಾದ ವಿಷಯವನ್ನು ಕೇವಲ ಚಿತ್ರವೊಂದು ತೆರೆದಿಡುತ್ತದೆ ಎಂದು ಅಭಿಪ್ರಾಯಪಟ್ಟರು.
ದೆಹಲಿ ಕರ್ನಾಟಕ ಸಂಘದಲ್ಲಿ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರ ನೇತೃತ್ವದಲ್ಲಿ ಚಿತ್ರಕಲೆಗಳ ಪ್ರದರ್ಶನಕ್ಕೆ ಚಿತ್ರಕಲಾವಿದರಿಗೆ ಅವಕಾಶ ಮಾಡಿಕೊಟ್ಟಿರುವುದು ಶ್ಲಾಘನೀಯ ಎಂದು ಈ ಸಂದರ್ಭದಲ್ಲಿ ಹೇಳಿದರು.
ಶ್ರೀಮತಿ ಸುಮಿತ್ರ ಅವರು ಬೇಲೂರಿನ ಚೆನ್ನಕೇಶವ ದೇವಾಲಯದ ಗಜ ಪೀಠದ ಗಜ ಹಾಗೂ ಆಭರಣಗಳನ್ನು ಆಯ್ಕೆ ಮಾಡಿಕೊಂಡು ಹುತ್ತದ ಮಣ್ಣಿನಿಂದ ಕಳೆದ 12 ವರ್ಷಗಳಿಂದ ಬೇರೆ ಬೇರೆ ರೀತಿಯ ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಇದಕ್ಕೆ ಅವರು ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಹುತ್ತದ ಮಣ್ಣುಗಳನ್ನು ಆಯ್ಕೆ ಮಾಡಿಕೊಂಡು ಬ್ರಶ್‌ನಿಂದ ಬೋರ್ಡ್‌ಗಳಲ್ಲಿ ಚಿತ್ರ ರಚಿಸಿ ಕಲಾಕೃತಿ ರಚನೆ ಮಾಡುತ್ತಿದ್ದಾರೆ. ಇವರ ಚಿತ್ರಕಲಾ ಪ್ರದರ್ಶನವು 13 ಅಕ್ಟೋಬರ್‌ನಿಂದ 21 ಅಕ್ಟೋಬರ್‌ವರೆಗೆ ನಡೆಯಿತು. ಅ

**ಅಭಿಮತ ವರದಿ**





ಶ್ರೀಮತಿ ಸುಮಿತ್ರ ಅವರು ತಮ್ಮ ಅಮೂಲ್ಯವಾದ ಕಲಾಕೃತಿಯನ್ನು ಸಂಘಕ್ಕೆ ನೀಡುತ್ತಿರುವುದು.




# ಕರ್ನಾಟಕವು ಸಾಂಸ್ಕೃತಿಕ ಮತ್ತು ಸಾಹಿತ್ಯಿಕವಾಗಿ ವಿಶ್ವದ ಗಮನಸೆಳೆದಿದೆ ದೆಹಲಿಯಲ್ಲಿ ಪಟ್ಲ ವಿಶ್ವ ಯಕ್ಷ ಸಂಭ್ರಮದಲ್ಲಿ -ಮನೀಷ್ ಸಿಸೋಡಿಯಾ

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಮಂಗಳೂರು ಇದರ ದೆಹಲಿ ಘಟಕದ ಆಶ್ರಯದಲ್ಲಿ ಯಕ್ಷಗಾನ ತಾಳಮದ್ದಳೆ, ನಾಟ್ಯ ವೈಭವ, ಯಕ್ಷಗಾನ ಬಯಲಾಟ ಮತ್ತು ಸನ್ಮಾನ ಸಮಾರಂಭ ಕಾರ್ಯಕ್ರಮಗಳ ಪಟ್ಲ ವಿಶ್ವ ಯಕ್ಷ ಸಂಭ್ರಮ ನವದೆಹಲಿಯ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅಳಿಕೆ ರಾಮಯ್ಯ ರೈ ವೇದಿಕೆಯಲ್ಲಿ ಇದೇ ಅಕ್ಟೋಬರ್ 2ರಂದು ನಡೆಯಿತು.

ದೆಹಲಿ ಸರಕಾರದ ಜಿಎಸ್‌ಟಿ ಕಮೀಶನರ್ ಶ್ರೀ ಹಿರಿಯಡ್ಕ ರಾಜೇಶ್ ಪ್ರಸಾದ್ ಅವರು ಸಮಾರಂಭವನ್ನು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ದಿ ವೀಕ್ ಪತ್ರಿಕೆಯ ಸ್ಥಾನೀಯ ಸಂಪಾದಕರಾದ ಶ್ರೀ ಕೆ.ಎಸ್. ಸಚ್ಚಿದಾನಂದ ಮೂರ್ತಿಯವರು ಮಾಡಿದರು. ದೆಹಲಿಯಲ್ಲಿ ಯಕ್ಷಗಾನ ಕೇಂದ್ರವೊಂದನ್ನು ಸ್ಥಾಪಿಸಿ ಯಕ್ಷಗಾನದ ಅಧ್ಯಯನ ಮತ್ತು ಕಲೆಯ ಪ್ರಸಾರವನ್ನು ಮಾಡಬೇಕು ಎಂದು ಅವರು ಕರೆಯಿತ್ತರು. ದೆಹಲಿಯಲ್ಲಿ ಈಗಾಗಲೇ ಕಥಕ್ಕಳಿ ಕೇಂದ್ರವೊಂದಿದ್ದು ಅದು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದೆ ಎಂದರು. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಕುರಿತು ಮಾತಾಡಿದ ಅವರು ಕರ್ನಾಟಕ ರಾಜ್ಯದ ವಿಭಜನೆಯಾಗದಂತೆ ನಾವು ಎಚ್ಚರಿಕೆಯಿಂದಿರಬೇಕು ಎಂದರು. ಮುಖ್ಯ ಅತಿಥಿಯಾಗಿದ್ದ ದೆಹಲಿಯ ಶಾಸಕಿ ಶ್ರೀಮತಿ ಪ್ರಮೀಳಾ ಠೋಕಸ್ ಅವರು ಮಾತಾಡಿ ಗಾಂಧಿಜಯಂತಿಯಂದು ನವದೆಹಲಿಯಲ್ಲಿ ನಡೆಯುತ್ತಿರುವ ಈ ಯಕ್ಷಗಾನ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಸಮಾರಂಭದಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ, ಟ್ರಸ್ಟ್‌ನ ದೆಹಲಿ ಘಟಕದ ಗೌರವ ಅಧ್ಯಕ್ಷ ಶ್ರೀ ಟಿ. ಶಿವಪ್ರಸಾದ್ ಶೆಟ್ಟಿ, ದೆಹಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ಶ್ರೀ ಪ್ರೇಮನಾಥ್ ರೈ, ಕರ್ನಾಟಕ ಬ್ಯಾಂಕ್‌ನ ಸಹಾಯಕ ಮಹಾ ಪ್ರಬಂಧಕ ಶ್ರೀ ಹಯವದನ ಉಪಾಧ್ಯಾಯ, ನೈವೇದ್ಯಂ ರೆಸ್ಟಾರೆಂಟ್ ಮಾಲಕ ಶ್ರೀ ಶೇಖರ್ ಬಂಗೇರಾ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸರವು ಕೃಷ್ಣ ಭಟ್, ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಟ್ರಸ್ಟ್‌ನ ವಿವಿಧ ಘಟಕಗಳ ಪ್ರತಿನಿಧಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ಟ್ರಸ್ಟ್‌ನ ದೆಹಲಿ ಘಟಕದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿದರು. ಬಾಲಕೃಷ್ಣ ನಾಯ್ಕ್ ವಂದಿಸಿದರು. ಟ್ರಸ್ಟ್‌ನ ಕಾರ್ಯದರ್ಶಿ ಶ್ರೀಮತಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರ್ವಹಿಸಿದರು. ನಂತರ ನಡೆದ ಭೀಷ್ಮ ಸೇನಾಧಿಪತ್ಯ ತಾಳ ಮದ್ದಳೆಯಲ್ಲಿ ಡಾ.ಎಂ. ಪ್ರಭಾಕರ ಜೋಶಿ, ಡಾ. ಪುರುಷೋತ್ತಮ ಬಿಳಿಮಲೆ, ಪೆರ್ಮುದೆ ಜಯಪ್ರಕಾಶ್ ಶೆಟ್ಟಿ, ಮಾಧವ ಬಂಗೇರ ಅವರು ಅರ್ಥದಾರಿಗಳಾಗಿದ್ದರು. ಅಪರಾಹ್ನ ನಡೆದ ಸಂಭ್ರಮ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ದೆಹಲಿ ಸರ್ಕಾರದ ಉಪ ಮುಖ್ಯಮಂತ್ರಿ ಶ್ರೀ ಮನೀಷ್ ಸಿಸೋಡಿಯಾ ಅವರು ಮಾತಾಡಿ ಕರ್ನಾಟಕವು ಸಾಂಸ್ಕೃತಿಕ ಮತ್ತು ಸಾಹಿತ್ಯಿಕವಾಗಿ ವಿಶ್ವದ ಗಮನಸೆಳೆದಿದೆ. ಯಕ್ಷಗಾನದ ಆಶಕ್ತ ಕಲಾವಿದರಿಗೆ ಸಕಾಲದಲ್ಲಿ ನೆರವು ನೀಡಿ, ಯಕ್ಷಗಾನದ ಬೆಳವಣಿಗೆ ಮತ್ತು ಪ್ರಚಾರದಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ಕೊಡುಗೆ ಮಹತ್ತರವಾದದ್ದು. ವಿಶ್ವದ ಸೈಬರ್ ಕೇಂದ್ರವಾಗಿ ಸಾಫ್ಟ್‌ವೇರ್ ಉದ್ಯಮಿಗಳಿಂದ ಬೆಳೆದ ಬೆಂಗಳೂರು ಇಂದು ಉತ್ತರಭಾರತದ ಬಹುತೇಕ ಇಂಜಿನಿಯರ್‌ಗಳಿಗೆ ಉದ್ಯೋಗದ ಕೇಂದ್ರವಾಗಿದೆ ಎಂದರು. ದೆಹಲಿಯು ಎಲ್ಲಾ ಭಾಷಿಕರ ರಾಷ್ಟ್ರ ರಾಜಧಾನಿಯಾಗಿರುವುದರಿಂದ ಕನ್ನಡ ಸೇರಿದಂತೆ ಅನೇಕ ಭಾಷೆಗಳ ಅಕಾಡೆಮಿಗಳನ್ನು ಸ್ಥಾಪಿಸಲು ದೆಹಲಿ ಸರಕಾರವು ತೀರ್ಮಾನಿಸಿದೆ ಎಂದರು. ರಾಕೇಶ್ ಪೂಂಜಾ ಮತ್ತು ಹರ್ಷಿತ್ ಮಾರ್ಲಾ ಅವರು ಸಂಪಾದಿಸಿದ 'ಪಟ್ಲ ಯಾನ' ಪುಸ್ತಕವನ್ನು ಶ್ರೀ ಮನೀಶ್ ಸಿಸೋಡಿಯಾ ಅವರು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆ ಮಾಡಿರುವ ಡಾ. ಪ್ರಭಾಕರ ಜೋಷಿ, ಉಮೇಶ್ ಶೆಟ್ಟಿ ಉಬರಡ್ಕ ಮತ್ತು ಉದಯೋನ್ಮುಖ ಪ್ರತಿಭೆ ಬಿಂದಿಯಾ ಶೆಟ್ಟಿಯವರಿಗೆ ಯಕ್ಷಧ್ರುವ ಪಟ್ಲ ಫೌಂಡೇಷನ್ ದೆಹಲಿ ಘಟಕದಿಂದ ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕವಿ, ವಿದ್ವಾಂಸ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಮಾತಾಡಿ ಯಕ್ಷಗಾನ ಕೇವಲ ಒಂದು ಕಲೆಯಾಗಿ ಉಳಿದುಕೊಳ್ಳದೇ ಸಂಸ್ಕೃತಿಯಾಗಿ ಬೆಳೆದಿದೆ ಎಂದರು. ಅಶಕ್ತ ಕಲಾವಿದರಿಗೆ ನೆರವಾಗುವ ಪಟ್ಲ ಫೌಂಡೇಶನ್‌ನ ಕಾರ್ಯವನ್ನು ಅವರು ಅಭಿನಂದಿಸಿದರು. ಯಕ್ಷಗಾನದ ಅನೇಕ ಕಲಾವಿದರು ಸಂಕಷ್ಟದಲ್ಲಿದ್ದಾರೆ; ಅವರನ್ನು ಕಾಪಾಡಿದರೆ ಮಾತ್ರವೇ ಕಲೆಯನ್ನು ಬೆಳೆಸಬಹುದು ಎಂಬ ಉದ್ದೇಶದೊಂದಿಗೆ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಸ್ಥಾಪನೆಯಾಗಿ ಕೆಲಸ ಮಾಡುತ್ತಿದೆ ಎಂದು ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ಅವರು ಹೇಳಿದರು. ವಸಂತಶೆಟ್ಟಿ ಬೆಳ್ಳಾರೆ ಅವರು ಸ್ವಾಗತಿಸಿದರು. ಟ್ರಸ್ಟ್‌ನ ಕೇಂದ್ರೀಯ ಸಮಿತಿಯ ಕಾರ್ಯದರ್ಶಿ ಶ್ರೀ ಪುರುಷೋತ್ತಮ ಕೆ. ಭಂಡಾರಿ ವಂದಿಸಿದರು. ಕೃಷ್ಣ ಭಟ್ ಕಾರ್ಯಕ್ರಮ ನಿರ್ವಹಿಸಿದರು. ನಂತರ ಪ್ರಸಿದ್ಧ ಕಲಾವಿದರಿಂದ ಗಜೇಂದ್ರ ಮೋಕ್ಷ ಯಕ್ಷಗಾನ ಪ್ರದರ್ಶನ ನಡೆಯಿತು. ಅ

ಅಭಿಮತ ವರದಿ





# ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನಿಂದ ನಾಡಪ್ರಭು ಕೆಂಪೇಗೌಡರ 3ನೇ ರಾಷ್ಟ್ರೀಯ ಉತ್ಸವ

ರಾಷ್ಟ್ರ ರಾಜಧಾನಿ ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಕೂಡ ನಾಡಪ್ರಭು ಕೆಂಪೇಗೌಡರ ರಾಷ್ಟ್ರೀಯ ಉತ್ಸವವನ್ನು ದಿನಾಂಕ 21.4.2018 ರಂದು ದೆಹಲಿ ಕರ್ನಾಟಕ ಸಂಘ ಸಭಾಂಗಣದಲ್ಲಿ ಆಚರಿಸಲಾಯಿತು. ದಿನವಿಡೀ ನಡೆದ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ, ಕಲೆ ನೃತ್ಯ ಪ್ರದರ್ಶನಗಳನ್ನು ಒಳಗೊಂಡಿದ್ದ ಈ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರು ಡಾ.ನಿರ್ಮಲಾನಂದ ಸ್ವಾಮೀಜಿ ಅವರ ಮತ್ತು ಪರಮಪೂಜ್ಯ ನಂಜಾವಧೂತ ಮಹಾಸ್ವಾಮೀಜಿ ಸ್ಫಟಿಕ ಪುರಿ ಮಹಾಸಂಸ್ಥಾನ ಮಠ ಅವರ ಸಾನ್ನಿಧ್ಯ ಮತ್ತು ಕೃಪಾಶೀರ್ವಾದಗಳೊಡನೆ ಅತ್ಯಂತ ಯಶಸ್ವಿಯಾಗಿ ನೆರವೇರಿತು

ಅಂದಿನ ಕಾರ್ಯಕ್ರಮದ ಆಕರ್ಷಣೆಗಳಲ್ಲಿ ಒಂದಾದ ಕನ್ನಡದ ಅತ್ಯುತ್ತಮ ಚಲನಚಿತ್ರ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಚಿತ್ರ ಬೆಳಿಗ್ಗೆ ಹನ್ನೊಂದು ಗಂಟೆಗೆ ಪ್ರದರ್ಶನಗೊಳ್ಳುವ ಮೂಲಕ ಪ್ರಾರಂಭಗೊಂಡ ಕಾರ್ಯಕ್ರಮ ಮಧ್ಯಾಹ್ನದ ಭೋಜನಾ ನಂತರ ಮತ್ತೊಂದು ಕುತೂಹಲ ಭರಿತ ಕಾರ್ಯಕ್ರಮವಾದ ಹಾಸ್ಯ ಸಂಜೆ ಯಲ್ಲಿ ಕನ್ನಡದ ಪ್ರಸಿದ್ಧ ಹಾಸ್ಯ ಸಾಹಿತಿಗಳಾದ ಪ್ರೊಫೆಸರ್ ಕೃಷ್ಣೇಗೌಡ ಹಾಗೂ ಶ್ರೀಮತಿ ಸುಧಾ ಬರಗೂರು ಅವರುಗಳ ನಗೆಹಾಸ್ಯ ಮತ್ತು ಹಾಸ್ಯ ಚಟಾಕಿಗಳಿಂದ ಸಭಿಕರೆಲ್ಲರಿಗೂ ಒಳ್ಳೆಯ ಮನರಂಜನೆ ರಂಜನೆ ನೀಡಿದವು.

ಅಂದಿನ ಕಾರ್ಯಕ್ರಮದ ಮುಖ್ಯ ಘಟ್ಟ ವಾದಪರಮಪೂಜ್ಯ ಸ್ವಾಮೀಜಿಗಳೀರ್ವರ ಆಶೀರ್ವಚನವಾಗಿದ್ದು ಜಗದ್ಗುರು ಡಾ. ನಿರ್ಮಲಾನಂದ ಸ್ವಾಮೀಜಿ ಅವರು ಬದುಕಿನಲ್ಲಿ ಸೇವೆಯ ಮಹತ್ವವನ್ನು ಅದರಲ್ಲೂ ಸಮಾಜ ಸೇವೆಯ ಮೂಲಕ ಪ್ರತಿಯೊಬ್ಬರೂ ಸಾರ್ಥಕತೆ ಪಡೆದುಕೊಳ್ಳಬೇಕೆಂದು ಹೇಳಿದರಲ್ಲದೆ ನಶ್ವರವಾದ ದೇಹ ಮತ್ತು ಲೌಕಿಕ ಜೀವನಕ್ಕೆ ಹೆಚ್ಚು ಅಂಟಿಕೊಳ್ಳಬಾರದು ಎಂಬುದಾಗಿ ಸಂದೇಶ ನೀಡಿದರು. ಕಾರ್ಯಕ್ರಮದ ಯಶಸ್ವಿಗಾಗಿ ನಾಡಪ್ರಭು ಕೆಂಪೇಗೌಡ ಫೌಂಡೆಶನ್‌ನ ಪದಾಧಿಕಾರಿಗಳನ್ನು ಪ್ರಮುಖವಾಗಿ ಅಧ್ಯಕ್ಷರಾದ ಬಿ.ಎಲ್. ಸುರೇಶ್ ಮತ್ತು ಕಾರ್ಯದರ್ಶಿ ಸಿ. ಎಂ. ನಾಗರಾಜ ಅವರ ಶ್ರಮವನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಬೆಳಿಗ್ಗಿನಿಂದಲೇ ಉಪಸ್ಥಿತರಿದ್ದ ಪರಮಪೂಜ್ಯ ನಂಜಾವಧೂತ ಸ್ವಾಮೀಜಿ ಅವರು ರಾಷ್ಟ್ರ ಮಟ್ಟದಲ್ಲಿ ಇಂತಹ ಕಾರ್ಯಕ್ರಮಗಳನ್ನು ನಡೆಸಿ ಕೆಂಪೇಗೌಡರಂತಹ ಮಹಾನ್ ವ್ಯಕ್ತಿಗಳನ್ನು ಕನ್ನಡೇತರರಿಗೂ ಪರಿಚಯಿಸುವ ಕೆಲಸ ಮಾಡುತ್ತಿರುವುದು ಸುತ್ಯಾರ್ಹವಾದುದು ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಕೇಂದ್ರ ಸಚಿವರಾದ ಶ್ರೀ ಡಿ.ವಿ.ಸದಾನಂದ ಗೌಡ
















ಅವರು ಮಾತನಾಡಿ ಸಮಾಜದ ಸರ್ವಾಂಗೀಣ ಬೆಳವಣಿಗೆಗೆ ಕೆಂಪೇಗೌಡರು ನೀಡಿದ ಕೊಡುಗೆ ಮಹತ್ವವಾದುದು. ಅವರು ಎಲ್ಲ ಜಾತಿ, ವರ್ಗಗಳ ಜನರಿಗೂ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ಹಲವಾರು ಪೇಟೆಗಳನ್ನು ನಿರ್ಮಿಸಿದ್ದದನ್ನು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮತ್ತೊಬ್ಬ ಮುಖ್ಯ ಅತಿಥಿ ರಾಜ್ಯ ಸಭಾ ಸದಸ್ಯರಾದ ಶ್ರೀ ರಾಜೀವ್ ಗೌಡ ಅವರು ಮಾತನಾಡಿ ಬೆಂಗಳೂರಿನ ನಿರ್ಮಾಣದ ಸಮಯದಲ್ಲಿಯೇ ಅದರಲ್ಲಿ ಒಂದು smart ಸಿಟಿ ನಿರ್ಮಾಣದ ಕಲ್ಪನೆಯನ್ನು ಹೊಂದಿದ್ದರಲ್ಲದೆ ಅದಕ್ಕೆ ಅನುಗುಣವಾಗಿ ನಗರ ನಿರ್ಮಾಣ ಯೋಜನೆ ರೂಪಿಸಿದ್ದರು. ಆದರೆ ಇಂದು ಬೆಂಗಳೂರು ಅತ್ಯಂತ ಕಲುಷಿತ ಗಾಳಿ, ನೀರು ಮತ್ತು ವಾತಾವರಣಗಳಿಂದ ನರಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮತ್ತೊಬ್ಬ ಅತಿಥಿ ಶ್ರೀ ನಾಗತಿಹಳ್ಳಿ ರಮೇಶ್ ಅವರು ಮಾತನಾಡಿ ಕೆಂಪೇಗೌಡರ ಚಿಂತನೆಗಳನ್ನು ಜಾಗತಿಕ ಸ್ತರದಲೂ ಅರಿವು ಮೂಡಿಸಲು ಪ್ರಯತ್ನಿಸಬೇಕು ಎಂದರು. ಫೌಂಡೆಶನ್‌ನ ಅಧ್ಯಕ್ಷರಾದ ಬಿ. ಎಲ್. ಸುರೇಶ ಅವರು ಮಾತನಾಡಿ ಮುಂದಿನ ದಿನಗಳಲ್ಲಿ ತಮ್ಮ ಸಂಸ್ಥೆ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ದೆಹಲಿಗೆ ಬರುವ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ವೆಬ್ ಸೈಟ್ ಮತ್ತು ವಸತಿ ವ್ಯವಸ್ಥೆಗಳನ್ನು ಮಾಡಿಕೊಡಲಾಗುವುದು ಎಂದರು.

ಫೌಂಡೆಶನ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ಈ ಕಾರ್ಯಕ್ರಮದ ರೂವಾರಿ ಸಿ. ಎಂ. ನಾಗರಾಜ ಕಾರ್ಯಕ್ರಮದಲ್ಲಿ ನೆರೆದಿದ್ದ ಎಲ್ಲರನ್ನು ಸ್ವಾಗತಿಸಿ, ವಂದಿಸಿದರು. ಶ್ರೀಮತಿ ಪೂಜಾರಾವ್ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಶ್ರೀ ವಿದ್ವಾನ್ ಕೋಲಾರ ರಮೇಶ್ ಅವರ ನಾಟ್ಯಾಂಜಲಿ ನೃತ್ಯ ಶಾಲೆ, ಹೊಸಕೋಟೆ ಹಾಗೂ ನಟರಾಜ ಕಲಾನಿಕೇತನ ಮಂಡ್ಯ ಮತ್ತು ಸ್ಥಳೀಯ ಕಲಾವಿದರುಗಳಿಂದ ಬಗೆಬಗೆಯ ನೃತ್ಯ, ಸಂಗೀತ, ಕಾರ್ಯಕ್ರಮಗಳೊಂದಿಗೆ ಕೆಂಪೇಗೌಡರ ರಾಷ್ಟ್ರೀಯ ಉತ್ಸವ ಯಶಸ್ವಿಯಾಯಿತು.

*ಅಭಿಮತ ವರದಿ*

# ದೆಹಲಿಯ ನೆನಪುಗಳು

*–ಡಾ. ಬಿ.ವಿ.ಅಡ್ಡೋಳಿ*

ದೀರ್ಘಕಾಲ ದೆಹಲಿಯಲ್ಲಿ ಕಳೆದು ಕೊನೆಗೆ ಪಾಂಡಿಚೇರಿಗೆ ಸ್ಥಳಾಂತರಿಸಿದ ನನಗೆ ಇತ್ತೀಚಿನ ದೆಹಲಿ ಭೇಟಿ ಕರ್ನಾಟಕ ಸಂಘದ ಯೋಗಕ್ಷೇಮ ವಿಚಾರಿಸಲು ಒಂದು ಸುವರ್ಣಾವಕಾಶ ಒದಗಿಸಿತು.

ಸಂಘದ ಆವರಣದಲ್ಲಿ ಕಾಲಿಡುತ್ತಿಲೇ ನನ್ನನ್ನು ಚಕಿತಗೊಳಿಸಿದ ವಿಷಯಗಳೆಂದರೆ – ಅತ್ಯಂತ ಮುತುವರ್ಜಿಯಿಂದ ಸಂಭಾಳಿಸಲ್ಪಟ್ಟ, ವೆಲ್‌ಮೇಯಿಟನ್ಡ್ ಸಮುಚ್ಚಯ ಕಟ್ಟಡ ಹಾಗೂ ಕೊಠಡಿಗಳು; ಪ್ರಾಂಗಣದಲ್ಲಿ ಓರಣವಾಗಿ ಜೋಡಿಸಲ್ಪಟ್ಟ ಕನ್ನಡ ವಾರ್ತಾ ಪತ್ರಿಕೆಗಳ ಸರಮಾಲೆ; ಕಿಕ್ಕಿರಿದು ತುಂಬಿದ ಕ್ಯಾಂಟೀನ್, ಪಕ್ಕದಲ್ಲಿಯೇ ದಿಡೀರೆಂದು ತಲೆ ಎತ್ತಿದ ವಿಶ್ವೇಶ್ವರಯ್ಯ ಮೆಟ್ರೋ ಸ್ಟೇಶನ್.

ಎಲ್ಲಕ್ಕಿಂತ ಖುಶಿಕೊಟ್ಟ ಸಂಗತಿಗಳೆಂದರೆ ಪ್ರಸ್ತುತ ಆಡಳಿತ ಸಮಿತಿಯ ರೂವಾರಿಗಳಾದ ಶ್ರೀ ಸಿ.ಎಂ.ನಾಗರಾಜ, ಶ್ರೀ ಕೆ.ಎಸ್.ಜಿ.ಶೆಟ್ಟಿ, ಶ್ರೀ ಚೆನ್ನು ಎಸ್. ಮಠದ ಹಾಗೂ ಸಂಘದ ಸಿಬ್ಬಂದಿ ಸ್ನೇಹಿತರೊಂದಿಗೆ ಹಳೆಯ ಅನುಭವಗಳನ್ನು ಮೆಲುಕು ಹಾಕುವ ರಸ ನಿಮಿಷಗಳು. ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಬೆಂಗಳೂರಿಗೆ ಹೋಗಿದ್ದರಿಂದ ಕೇವಲ ಫೋನ್ ಮೂಲಕ ಮಾತನಾಡಿದೆ.

ದೆಹಲಿ ಕರ್ನಾಟಕ ಸಂಘದ ಸಾಧನೆಗಳ ಪಟ್ಟಿ ದೊಡ್ಡದು. ಮಹಾನಗರ ನೂಕು ನುಗ್ಗಾಟದ ಮಧ್ಯದಲ್ಲೂ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ; ಜೊತೆಗೆ ಊಟ, ಕಾಫಿ ತಿಂಡಿ ಸಮಾರಾಧನೆ; ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಸಾಹಿತ್ಯ, ಸಂಗೀತ, ಜಾನಪದ ಅಕಾಡೆಮಿಗಳ ಸಹಭಾಗಿತ್ವದಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಶ್ರೇಷ್ಠ ಕಲಾವಿದರ ಕಾರ್ಯಕ್ರಮಗಳ ಪ್ರದರ್ಶನ; ಜೊತೆಗೆ ಆನೂಚಾನವಾಗಿ ನಡೆದು ಬಂದ ಕಾರ್ಯಕ್ರಮಗಳು – ವನವಿಹಾರ, ವಾರ್ಷಿಕೋತ್ಸವ, ಆಟೋಟ ಸ್ಪರ್ಧೆಗಳು, ಕ್ರಿಕೆಟ್ ಟೂರ್ನಮೆಂಟ್, ವಿಚಾರ ಸಂಕಿರಣ, ಕಾವ್ಯ ವಾಚನ, ಯಕ್ಷಗಾನ, ತಾಳಮದ್ದಳೆ, ಹೊಸ ಹೊಸ ಪುಸ್ತಕಗಳ ಪ್ರಕಟಣೆ, ಅಭಿಮತದ ಝೇಂಕಾರ.

ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಲೇಬೇಕು. ಡಾ. ಬಿಳಿಮಲೆಯವರ ನೇತೃತ್ವದಲ್ಲಿ ಜೆ.ಎನ್.ಯು ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆ, ದೆಹಲಿ ಸರಕಾರದ ಛತ್ರಛಾಯೆಯಲ್ಲಿ ಇನ್ನೊಂದು ಕನ್ನಡ ಅಕಾಡೆಮಿಗೆ ಅವಕಾಶ, ಸಾರಿಗೆ ಸಂಪರ್ಕವನ್ನು ಸುಲಭಗೊಳಿಸಬಲ್ಲ ವಿಶ್ವೇಶ್ವರಯ್ಯ ಮೆಟ್ರೋ ಸಾನ್ನಿಧ್ಯ ಇವೆಲ್ಲ ಬೆಳವಣಿಗೆಗಳು ಮುಪ್ಪರಿಗೊಂಡು ದೆಹಲಿ ಕರ್ನಾಟಕ ಸಂಘಕ್ಕೆ ಒಂದು ನೂತನ ಕಾಯಕಲ್ಪ ಸಿಗಬಲ್ಲ ಸಾಧ್ಯತೆ, ಸಮಸ್ತ ಕನ್ನಡಿಗರಿಗೆ ಒಂದು ಗರಿಮೆಯ ವಿಷಯವೇ ಸರಿ. ಈ ಯಶಸ್ಸಿನ ಹಕ್ಕುದಾರರು ಅನೇಕರು. ಹಠಬಿಡದ ತಿವಿಕ್ರಮನಂತೆ ಹಗಲಿರುಳು ದುಡಿಯುತ್ತ "ಸಂಘಂ ಶರಣಂ ಗಚ್ಛಾಮಿ" ಎಂದು ಮುನ್ನುಗ್ಗುತಿರುವ ಲೀಡರ್ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಅವರ ಟೀಮ್; ಇವರ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿರುವ ಪ್ರಾಮಾಣಿಕ ಸಿಬ್ಬಂದಿ ವರ್ಗ; ಸಂಘವನ್ನು ಎತ್ತಿಕಟ್ಟಿ, ಕಾಲಕಾಲಕ್ಕೆ ನೀರೆರದು ಪೋಷಿಸಿದ ಭೂತಪೂರ್ವಕ ಪದಾಧಿಕಾರಿಗಳು; ಸಂಘಕ್ಕೆ ವರ್ಣರಂಜಿತ ಮುಖಪತ್ರಿಕೆಯಾಗಿ ಬೆಳಗುತ್ತಿರುವ ಅಭಿಮತ ಬಳಗದ ಸಾಹಸ, ದೆಹಲಿಯ ವಿವಿಧ ಭಾಗಗಳಲ್ಲಿ ಹಬ್ಬಿ 'ಭುಪಾರುಸ್ತಮ್'ನಂತೆ, ಸಂಘದೊಂದಿಗೆ ನಿಕಟ ಸಂಪರ್ಕ ಹಾಗೂ ಸಹಕಾರ ನೀಡುತ್ತಿರುವ ಅನೇಕ ಸ್ಥಳೀಯ ಸಂಘ ಸಂಸ್ಥೆಗಳು, ಇವರೆಲ್ಲರ "ಅನ್‌ಕಂಡೀಷನಲ್ ಸಪೋರ್ಟ್‌ಗೆ" ದೆಹಲಿ ಕರ್ನಾಟಕ ಸಂಘದ ಪಾಸ್‌ಪೋ.

ಹಾಗಾದರೆ ನಮ್ಮಲ್ಲೇನೂ ಕುಂದುಕೊರತೆಗಳೇ ಇಲ್ಲವೇ? ಪ್ರಸ್ತುತವಾಗಿ ನಮ್ಮನ್ನು ಕಾಡುವ ಯಕ್ಷಪ್ರಶ್ನೆಗಳಿವೆ: ದೆಹಲಿಗೆ ಬಂದ ಹೊಸತರಲ್ಲಿ ಸಂಘದೊಂದಿಗೆ ಬೆರೆತು, ಕಲೆತು ಕಾಲಕ್ರಮೇಣ ಸಂಘದಿಂದ ದೂರವಾಗುತ್ತಿರುವ ಮಂದಿ ಹೆಚ್ಚಾಗುತ್ತಿರುವರೆ? ಇದು ನಿಜವಾದರೆ, ಈ ಪರಿಸ್ಥಿತಿಗೆ ಕಾರಣಗಳೇನು? ಮಹಾನಗರದ ಸೆಳೆತ ಆಕರ್ಷಣೆಗಳೆ? ನಗರ ಜೀವನದಿಂದ ಪರಿಣಮಿಸಿದ ದೈಹಿಕ, ಮಾನಸಿಕ ಒತ್ತಡಗಳೇ? ಮಕ್ಕಳ ವಿದ್ಯಾಭ್ಯಾಸ, ಟ್ಯೂಶನ್‌ಗಳ ಚಿಂತೆಯೇ? ಸ್ಥಳೀಯ ಸಂಸ್ಕೃತಿಯ ಪ್ರಭಾವಕ್ಕೊಳಗಾದ ಮಕ್ಕಳ ಮನೋಸ್ಥಿತಿಯೇ? ಅಥವಾ ಸಂಘದಲ್ಲಿ ರಾಜಕೀಯ ಜಾಸ್ತಿ ಸ್ವಾಮಿ, ಮನೆಯಲ್ಲಿ ಹಾಯಾಗಿರೋಣ ಎನ್ನುವ 'ಬಲವಂತ ವೈರಾಗ್ಯವೇ' ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕಾಗಿದೆ.

ಒಂದು ಮಾತನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಭಾಷೆಗಳ ಪತನ ಕೇವಲ ಕನ್ನಡಕ್ಕೆ ಸೀಮಿತವಾಗಿಲ್ಲ, ಅದು ವಿಶ್ವದ ಅನೇಕ ಪ್ರಸಿದ್ಧ ಭಾಷೆಗಳಿಗೂ ಅನ್ವಯಿಸುವ ಕಟು ಸತ್ಯ. ಕಾರಣಗಳು ಹಲವಾರು. ಮುಖ್ಯವಾಗಿ ಮಾನವನ ಜೀವನ ಶೈಲಿಯನ್ನೇ ಆಕ್ರಮಿಸಿದ ಆಧುನಿಕ ತಂತ್ರಜ್ಞಾನ; ಟೀವಿ, ಮೂವಿಗಳನ್ನು ಮೀರಿದ ಅಂತರ್ಜಾಲದ ಆವಿರ್ಭಾವ – ಗೂಗಲ್ ಗುರು ಪ್ರವೇಶ, ಸೋಶಿಯಲ್ ಮೀಡಿಯಾ, ಫೇಸ್‌ಬುಕ್, ಟ್ವಿಟ್ಟರ್, ವಾಟ್ಸಪ್‌ಗಳ ಬಿರುಗಾಳಿ, ಚಂಡಮಾರುತದ ನೆಪದಲ್ಲಿ ಮನುಷ್ಯನ ಜೀವನವನ್ನೇ ಕಬಳಿಸುತ್ತಿರುವುದು, ಪವಾದರೂ ಸತ್ಯ! ಹಾಗಾದರೆ ಈ ಚಕ್ರವ್ಯೂಹದಿಂದ ಪಾರಾಗುವ ಬಗೆ ಇಲ್ಲವೇ? ಖಂಡಿತ ಇದೆ! ಯಾವ ನಮ್ಮ ಭಾಷೆ, ಸಂಸ್ಕೃತಿಯನ್ನು ಅಲ್ಲೋಲಕಲ್ಲೋಲ ಮಾಡಲು ಹೊರಟಿದೆಯೋ, ಅದೇ ಶಕ್ತಿ ಒಂದು ಭವಿಷ್ಯವನ್ನು ಅರ್ಥೈಸಲು ಸಹಕಾರಿಯಾದೀತು. ಅದು ಹೇಗೆ?

ಬೇಕಾಗಿದೆ ಅ–ಕನ್ನಡದಿಂದ ಇ ಕನ್ನಡಕ್ಕೆ ವರ್ಗಾವಣೆ, ಯುವ ವೇದಿಕೆಯ ಮೂಲಕ

ಭಾಷಾಭಿಮಾನಿಗಳೇ, ಕ್ಷಮೆ ಇರಲಿ, ಭಾಷೆ ಕೇವಲ ಅಭಿವ್ಯಕ್ತಿಯ ಒಂದು ಮಾಧ್ಯಮ. ಭಾಷೆಗಿಂತಲೂ ಮೀರಿದ್ದು – ಸಂಸ್ಕೃತಿ, ಅದೇ ನಮ್ಮ ನೆಲಗಟ್ಟು, ಚೌಕಟ್ಟು. ಬಹುಶಃ ದೇಶದ ಯಾವುದೇ ಇತರ ರಾಜ್ಯ ಕರ್ನಾಟಕ ಸೃಷ್ಟಿಸಿದಷ್ಟು ವೈವಿಧ್ಯತೆಗಳನ್ನು, ಕಲೆಯ ಪ್ರಾಕಾರಗಳನ್ನು ಸೃಷ್ಟಿಸಿರಲಾರವು. ಅಥವಾ ಇತರರ ಸಂಸ್ಕೃತಿ, ಸಂಪ್ರದಾಯ, ಭಿನ್ನತೆಗಳನ್ನು ಗೌರವಿಸಿರಲಿಕ್ಕಿಲ್ಲ. ಇದು ನಮ್ಮ ಗರಿಮೆಯೇ ಹೊರತು ಕನ್ನಡದ 'ಹೋರಾಟಗಾರರು' ಭಾವಿಸಿದ ದೌರ್ಬಲ್ಯ ಅಲ್ಲ!. ಇಂದು ಬೇಕಾದ ಬದಲಾವಣೆ ಆಧುನಿಕ ತಂತ್ರಜ್ಞಾನ ಪರಿಕರಗಳನ್ನು ಬಳಸಿ ಕರ್ನಾಟಕದ ವೈಶಿಷ್ಟ್ಯತೆ, ಶಿಷ್ಟತೆಗಳನ್ನು ಯುವ ಜನಾಂಗದ ಮೂಲಕ ಜಗತ್ತಿಗೆ ತಲುಪಿಸುವ ಘನಕಾರ್ಯ. ಸಂಸ್ಕೃತಿಯನ್ನು ಹೇರಲಾಗದು. ಇತರರು ಅದನ್ನು ಹೀರಿಕೊಳ್ಳಬೇಕು. "ವ್ಯಕ್ತಿಯ ಸರ್ವಾಂಗೀಣ ವಿಕಾಸವೇ ಶಿಕ್ಷಣದ ಪರಮಗುರಿ" ಎಂದು ಘೋಷಿಸುವ ನಾವು ಮಕ್ಕಳಿಗೆ ಕೇಳುವ ಪ್ರಶ್ನೆ –ಎಷ್ಟು ಸ್ಕೋರ್ ಮಾಡಿದೆ? ಯಾವ ನೌಕರಿಗೆ ಅರ್ಜಿ ಹಾಕಿದೆ, ಈ ಸ್ಪರ್ಧಾತ್ಮಕ ವಾತಾವರಣದಿಂದ ಹೊರಗೆ ಬಂದು ಸಹಕಾರ, ಸಹಯೋಗ, ಸಂಯಮ, ಸಮಾಧಾನ, ಸಂವೇದನ, ಸಹನಶೀಲತೆ ಇನ್ನೂ ಸಾಕಾರಗೊಳಿಸುವ ಪ್ರಯತ್ನ ನಮ್ಮೆಲ್ಲರಿಂದ ಆಗಬೇಕಾಗಿದೆ.



ಸಂಘದ ಭವಿಷ್ಯತ್ತಿನ ಹಿತದೃಷ್ಟಿಯಿಂದ ಕೇವಲ ಮೂರು ಕಿವಿ ಮಾತುಗಳನ್ನು ಹೇಳಬಯಸುತ್ತೇನೆ. ಅವು ದೇವರಾಣೆಗೂ ನನ್ನವಲ್ಲ! ನಮ್ಮ ನಾಡು ನುಡಿಯ ದಿಗ್ಗಜರು ಹೇಳಿದ ಪಂಕ್ತಿಗಳನ್ನೇ ಮರು ಪ್ರಸಾರ ಮಾಡುತ್ತಿದ್ದೇನೆ. ಸೂಕ್ತವೆನಿಸಿದರೆ ಕೇಳಿ ಇಲ್ಲವಾದರೆ ಕೇಳಬೇಡಿ!.

ಚುನಾವಣೆಯ ಸಂದರ್ಭದಲ್ಲಿ ಮಾತ್ರ ಎದ್ದೇಳುತ್ತ, ನಿದ್ದೆಗಣ್ಣನ್ನು ತೆರೆಯುವ ಮತದಾರ ಮಹನೀಯರಿಗೆ, ಮಹಿಳೆಯರಿಗೆ ಡಿ.ವಿ.ಜಿಯವರು ಹೇಳಿದ್ದು, ನಾನಲ್ಲ:

ಹೊಸ ಚಿಗುರು, ಹಳೆ ಬೇರು ಕೂಡಿರಲು ಮರಸೊಬಗು
ಹೊಸಯುಕ್ತಿ ಹಳೆ ತತ್ವದೊಡಗೂಡಿ ಧರ್ಮ;
ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳೈವಿಸೆ
ಜಸವು ಜನಜೀವನಕೆ ಮಂಕುತಿಮ್ಮ

ಯಾರಿಗೆ ಓಟು ಹಾಕಲಿ, ಯಾರಿಗೆ ಬಿಡಲಿ? ಸಂಘಕ್ಕೆ ಸಮಯ ಕೊಡಬಲ್ಲ ಪ್ರತಿಭಾವಂತ ತರುಣರು ಹಾಗೂ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬಲ್ಲ ಅನುಭವಿ ತಲೆಗಳು – ಇವು ಕೂಡಿದಾಗ ಮತ್ರ ದೆಹಲಿ ಕನ್ನಡಿಗನ ಜನ ಜೀವನಕ್ಕೆ ಒಳ್ಳೆಯದಾಗುವುದರಲ್ಲಿ ಸಂದೇಹವಿಲ್ಲ.

ಸಂಘದ ಪದಾಧಿಕಾರಿಗಳಿಗೆ – ಬಸವಣ್ಣನ ವಚನ ನುಡಿ

"ಕಳಬೇಡ" (ಸಂಘದ ಹಣ), "ಕೊಲಬೇಡ" (ಕನ್ನಡಿಗರ ಶಿಷ್ಟಾಚಾರ, ಸಭ್ಯತೆಯನ್ನು),
"ಹುಸಿಯ ನುಡಿಯಲು ಬೇಡ" (ಪೊಳ್ಳು ಆಶ್ವಾಸನೆ)
"ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ" (ಸಿಬ್ಬಂದಿ ವರ್ಗದವರೊಂದಿಗೆ ವರ್ತಿಸುವಾಗ) "ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ" (ಮೈಕ್ ಸಿಕ್ಕಾಗಲೆಲ್ಲಾ)
"ಇದೋ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ" (ಈ ಅಂತರಂಗ ಬಹಿರಂಗವಾದಗಲೇ ನಮ್ಮ ಸಂಘದ ಅಭಿವೃದ್ಧಿ!)

ದೆಹಲಿಯ ಕರ್ನಾಟಕ ಸಂಘದ ಚೇತನಕ್ಕೆ ಕುವೆಂಪು ಹೇಳಿದ್ದು,

"ಓ ನನ್ನ ಚೇತನ, ಆಗು ನೀ ಅನಿಕೇತನ. . .
ಅನಂತರಾನನಂತವಾಗಿ, ಆಗುತಿಹನೆ ನಿತ್ಯಯೋಗಿ
ಅನಂತ ನೀ ಅನಂತನಾಗು, ಆಗು, ಆಗು, ಆಗು ನೀ . . ."

ಓ ನನ್ನ ಕರ್ನಾಟಕ ಸಂಘವೆ, ಕೇವಲ ಕಟ್ಟಡ, ಸಾಧನ, ಪರಿಕರ, ಸಾಮಗ್ರಿಗಳನ್ನು ಮೀರಿ, ಒಂದು ಸಚೇತನ ಶಕ್ತಿಯಾಗಿ ಮೆರೆ. ನಿನ್ನ ದಿವ್ಯ ಚೇತನಕ್ಕೆ ಅಂತ್ಯ ಬರದಿರಲಿ. ಅದು ಅನಂತಕಾಲ ಹೊಮ್ಮುತ್ತಿರಲಿ, ಚಿಮ್ಮುತ್ತಿರಲಿ!

# ಗೋಕರ್ಣ ಮಂಡಲದ ಹೊಸ ಕಾರ್ಯಕಾರಿ ಸಮಿತಿ







ಗೋಕರ್ಣ ಮಂಡಲ (ರಿ) ನವದೆಹಲಿಯ ವಾರ್ಷಿಕ ಶಾರದಾಪೂಜೆಯು 19 ಒಕ್ಟೋಬರ್ ನಂದು ಡೆಲ್ಲಿ ಕನ್ನಡ ಶಾಲೆಯಲ್ಲಿ ಪಂಡಿತ್ ರಮೇಶ್ ವರ್ಧನ್ ಅವರ ನೇತೃತ್ವದಲ್ಲಿ ನಡೆಯಿತು. ಪೂಜೆಯ ನಂತರ ವಾರ್ಷಿಕ ಸಭೆ ನಡೆದಿದೆ. ಕಾರ್ಯಕ್ರಮದ ಆರಂಭದಲ್ಲಿ ಹೊಸದಾಗಿ ಬಂದ ಸದಸ್ಯರ ಸೇರ್ಪಡೆ ಮತ್ತು ಪರಿಚಯ ನಡೆಯಿತು. ನಂತರ ಸಮಿತಿಯು ಬದಲಾವಣೆ ನಡೆಯಿತು. ಹೊಸ ಸಮಿತಿಯ ವಿವರ ಇಲ್ಲಿದೆ.

ಅಧ್ಯಕ್ಷರು : ಶ್ರೀ ನಾರಾಯಣ ಭಟ್
ಕಾರ್ಯದರ್ಶಿ : ಶ್ರೀ ಸತೀಶ್ ಹೆಗಡೆ
ಖಜಾಂಜಿ : ಶ್ರೀಮತಿ ಲಲಿತಾ ಶರ್ಮಾ

ಕಾರ್ಯಕಾರಿ ಸಮಿತಿ ಸದಸ್ಯರು : ಶ್ರೀ ವಿಕ್ರಂ ಭಟ್, ಶ್ರೀಮತಿ ಮಮತಾ ಹೆಗಡೆ, ಶ್ರೀಮತಿ ಪೂರ್ಣಿಮಾ ಹೆಗಡೆ, ಶ್ರೀಮತಿ ವಿಜಯ ಲಕ್ಷ್ಮೀ ಭಟ್, ಶ್ರೀಮತಿ ಕಿರಣಾ ಭಟ್, ಶ್ರೀಮತಿ ಪ್ರಭಾ ಉಪಾಧ್ಯಾಯ, ಫ್ಲೈಟ್ ಲೆಫ್ಟಿನೆಂಟ್ ಆದಿತ್ಯ ನಾರಾಯಣ ಪಿ

ಆಯ್ಕೆಯಾದ ಎಲ್ಲಾ ಸದಸ್ಯರನ್ನು ಮಾಜಿ ಅಧ್ಯಕ್ಷರಾದ ಸುರೇಶ್ ಹೆಗಡೆ ಅವರು ಸ್ವಾಗತಿಸಿದರು. ನಂತರ ಮಾತನಾಡಿದ ಹಾಲಿ ಅಧ್ಯಕ್ಷರಾದ ನಾರಾಯಣ ಭಟ್ ಅವರು ಮುಂದಿನ ದಿನಗಳಲ್ಲಿ ಪೌರಾಣಿಕ ಪ್ರವಚನ, ಐಸ್ ಕ್ರೀಮ್ ಈವೆಂಟ್, ಪಿಕ್‌ನಿಕ್, ಕರ್ನಾಟಕ ಸಂಘದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸ್ಪೋರ್ಟ್ಸ್ ಈವೆಂಟ್ ಮೂಲಕ ಸಂಘದ ಕಾರ್ಯಕ್ರಮವನ್ನು ಸಕ್ರಮವಾಗಿ ನಡೆಸೋಣ ಎಂದು ತಿಳಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಕಾರ್ಯದರ್ಶಿ ಸತೀಶ್ ಹೆಗಡೆ ಅವರು ವಂದಿಸಿದರು.

***ಸತೀಶ್ ಹೆಗಡೆ***

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Nov -2018, Vol. No.29, Issue No.2, Price Rs.1/-
RNI Regn. No. 53405/91, DL-SW-1/4016/16-18
Date of Publication : Nov 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022, Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

# ಡಿ. ಭೀಮರಾವ್ ಮುರಗೋಡ ಅವರ ಕೆಲವು ಕಲಾಕೃತಿಗಳು





